ಸಂಪಾದಕ ಮಂಡಳಿ

ಗೌರವ ಸಂಪಾದಕರು
ಶ್ರೀ ಯೋಗೀಶ್ ಟಿ.
ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ

ಗೌರವ ಸಹ ಸಂಪಾದಕರು:
ಶ್ರೀ ಮಂಜುನಾಥ
ಪ್ರಾಂಶುಪಾಲರು ಹಾಗೂ ಪದನಿಮಿತ್ತ ಸಹ ನಿರ್ದೇಶಕರು,
ಶಿಕ್ಷಕರ ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ.

ಸಹ ಸಂಪಾದಕರು
ಶ್ರೀ ಪ್ರಸಾದ್ ಎಸ್.ಕೆ.ಬಿ.
ಉಪನಿರ್ದೇಶಕರು (ಅಭಿವೃದ್ಧಿ)
ಸಾರ್ವಜನಿಕ ಶಿಕ್ಷಣ ಇಲಾಖೆ, ಚಿತ್ರದುರ್ಗ

ಸಂಪಾದಕರು
ಶ್ರೀ ರಾಘವೇಂದ್ರ ಎನ್.
ಉಪನ್ಯಾಸಕರು.
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಚಿತ್ರದುರ್ಗ.

ಸಹಾಯಕ ಸಂಪಾದಕರು

1. **ಶ್ರೀ ಡಿ. ಆರ್. ಕೃಷ್ಣಮೂರ್ತಿ** ಹಿರಿಯ ಉಪನ್ಯಾಸಕರು, ಡಯಟ್, ಚಿತ್ರದುರ್ಗ
2. **ಶ್ರೀ ರಾಜಣ್ಣ** ಹಿರಿಯ ಉಪನ್ಯಾಸಕರು, ಡಯಟ್, ಚಿತ್ರದುರ್ಗ
3. **ಶ್ರೀ ಭರಮಪ್ಪ ಮೈಸೂರು** ಹಿರಿಯ ಉಪನ್ಯಾಸಕರು, ಡಯಟ್, ಚಿತ್ರದುರ್ಗ
4. **ಶ್ರೀ ಸುರೇಶ್** ಹಿರಿಯ ಉಪನ್ಯಾಸಕರು, ಡಯಟ್, ಚಿತ್ರದುರ್ಗ
5. **ಶ್ರೀ ಹಾಲಮೂರ್ತಿ** ಹಿರಿಯ ಉಪನ್ಯಾಸಕರು, ಡಯಟ್, ಚಿತ್ರದುರ್ಗ

ಸಂಪಾದನಾ ಸಮಿತಿ ಸದಸ್ಯರು

1. ಪ್ರವಾಚಕರು ಹಾಗೂ ಉಪನ್ಯಾಸಕರು, ಸಿ.ಟಿ.ಇ. ಚಿತ್ರದುರ್ಗ
2. ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ, ಚಿತ್ರದುರ್ಗ
3. ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳು
4. ಎಲ್ಲಾ ಉಪನ್ಯಾಸಕರು, ಡಯಟ್, ಚಿತ್ರದುರ್ಗ.
5. ಜಿಲ್ಲೆಯ ಎಲ್ಲಾ ಡಿ.ಇ.ಡಿ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಉಪನ್ಯಾಸಕರು.
6. ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಪದಾಧಿಕಾರಿಗಳು ಜಿಲ್ಲೆ ಮತ್ತು ತಾಲ್ಲೂಕು ಪ್ರೌಢಶಾಲಾ ಮತ್ತು ಪ್ರಾಥಮಿಕ ಮುಖ್ಯ ಶಿಕ್ಷಕರ ಮತ್ತು ಶಿಕ್ಷಕರ ಸಹ ಶಿಕ್ಷಕರ ಸಂಘಗಳು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಗಳು, ಚಿತ್ರದುರ್ಗ.

ಪರಿವಿಡಿ

ಕ್ರ ಸಂ.	ವಿಷಯ	ಲೇಖಕರು	ಪುಟ ಸಂ
1	ಆಶಯ ನುಡಿಗಳು	ಶ್ರೀ ಯೋಗೀಶ್ ಟಿ. ಮುಖ್ಯ ಕಾರ್ಯನಿರ್ವಹಣಾಧಿಕಾರಿ	3
2	ಸಂಪಾದಕೀಯ	ಉಪನಿರ್ದೇಶಕರು ಆಡಳಿತ ಮತ್ತು ಅಭಿವೃದ್ಧಿ	4
3	ಶಾಲಾ ಮುಖ್ಯಸ್ಥರು ಮತ್ತು ಶಿಕ್ಷಕರ ಸಮಗ್ರ ಮುನ್ನಡೆಗಾಗಿ ರಾಷ್ಟ್ರೀಯ ಉಪಕ್ರಮ	ರಾಜು ಎಂ.ಡಿ. ಸಿ.ಆರ್.ಪಿ. ಅಂದನೂರು, ಹೊಳಲ್ಕೆರೆ	5–6
4	"ಕೊರೋನಾ ಸಮಯದಲ್ಲಿ ಅತ್ಯುತ್ತಮ ನಲಿ–ಕಲಿ ತರಗತಿ ಕೋಣೆ ನಿರ್ಮಿಸಿರುವ ಶಿಕ್ಷಕರು"	ರಾಘವೇಂದ್ರ ಟಿ.ಎಂ. ಸಿ.ಆರ್.ಪಿ. ಚಿಕ್ಕಮ್ಮಿಗನೂರು	7–9
5	ವಿದ್ಯಾಗಮ ನಿರಂತರ ಕಲಿಕಾ ಕಾರ್ಯಕ್ರಮ ಹೊಳಲ್ಕೆರೆ ತಾಲೂಕಿನಲ್ಲಿ ಶೈಕ್ಷಣಿಕ ಪ್ರಗತಿಯ ಸಾಧನ	ಶ್ರೀ ಉಮೇಶ್ ಟಿ. ಪಿ. ಸ.ಕಿ.ಪ್ರಾ.ಶಾಲೆ ಅಮೃತಾಪುರ	10–12
6	ಸರಕಾರಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚಿಸಿದ ಆಂಗ್ಲ ಮಾಧ್ಯಮ ತರಗತಿ	ಶ್ರೀ ಜಿ.ಎಸ್. ನಾಗರಾಜ್ ಉಪನ್ಯಾಸಕರು, ಡಯಟ್, ಚಿತ್ರದುರ್ಗ	13–14
7	10ನೇ ತರಗತಿ ಗಣಿತ ಏಕರೂಪ ಶಿಕ್ಷಣ	ಶ್ರೀ ಎಮ್. ಪ್ರಕಾಶ್ ಉಪನ್ಯಾಸಕರು, ಡಯಟ್, ಚಿತ್ರದುರ್ಗ	14
8	ಆತ್ಮ ಪ್ರಜ್ಞೆ	ಶ್ರೀ ಕೆ.ಎಮ್. ನಾಗರಾಜ್ ಉಪನ್ಯಾಸಕರು, ಡಯಟ್, ಚಿತ್ರದುರ್ಗ	15
9	The Importance of Grammar in English language teaching	ಶ್ರೀ ರಂಗನಾಥ ಉಪನ್ಯಾಸಕರು, ಡಯಟ್, ಚಿತ್ರದುರ್ಗ	16
10	ಕೈ ಬರಹ ನಿಘಂಟು ರಚಿಸಿದ ಕ್ರಿಯಾಶೀಲ ಶಿಕ್ಷಕಿ ಅನಿತಾ	ಬಸವರಾಜು ಎಸ್. ಉಪನ್ಯಾಸಕರು, ಡಯಟ್, ಚಿತ್ರದುರ್ಗ	17–18
11	ಶಿಕ್ಷಣದಲ್ಲಿ ತಂತ್ರಜ್ಞಾನ ಕಾರ್ಯಕ್ರಮ	ಗುರುಪಾದಪ್ಪ ಶಿರಬಡಗಿ	19–20
12	ಶಿಕ್ಷಕನೋರ್ವನ ಆತ್ಮ ಸಿಂಚನ	ಕರ್ನಾಟಕ ಶಿಕ್ಷಕರ ಬಳಗ	21
13	ಒಗಟು	ವಿ. ಕನಕಮ್ಮ ಉಪನ್ಯಾಸಕರು,ಡಯಟ್, ಚಿತ್ರದುರ್ಗ	22
14	ಇಂದಿನ ಶಿಕ್ಷಣ : ಶಿಕ್ಷಕನ ಪಾತ್ರ	ಡಾ. ಬಿ.ಎಂ. ಗುರುನಾಥ ಉಪನ್ಯಾಸಕರು ಮತ್ತು ಮಾಜಿ ಸದಸ್ಯರು, ಕರ್ನಾಟಕ ಯಕ್ಷಗಾನ ಬಯಲಾಟ ಆಕಾಡೆಮಿ.	23–26

ಆಶಯ ನುಡಿಗಳು

ಆತ್ಮೀಯ ಎಲ್ಲಾ ಶಿಕ್ಷಕ ಬಾಂಧವರೆ,

ಖ್ಯಾತ ತತ್ವಜ್ಞಾನಿ ಕಾನ್‌ಫ್ಯೂಷಿಯಸ್ ಹೇಳಿರುವಂತೆ "ಶಿಕ್ಷಣ ನಮಗೆ ಸ್ವ–ನಂಬಿಕೆಯನ್ನು ಬೆಳೆಸುತ್ತದೆ, ಸ್ವ–ನಂಬಿಕೆ ನಮ್ಮಲ್ಲಿ ಆಶಾಭಾವನೆ ತುಂಬುತ್ತದೆ, ಆಶಾ ಭಾವನೆ ವಿಶ್ವ ಶಾಂತಿಯನ್ನು ಬೆಳೆಸುತ್ತದೆ" ಶಿಕ್ಷಣ ಎಂದರೆ ಮುಂದಿನ ಪೀಳಿಗೆಗೆ ಈ ದಿನ ನಾವು ಮಾಡುವ ವಿಶೇಷವಾದ ಹೂಡಿಕೆಯಾಗಿದೆ. ಈ ಹೂಡಿಕೆ ಕೇವಲ ಆರ್ಥಿಕ ಹೂಡಿಕೆಯಾಗಿರದೇ ಮಕ್ಕಳಲ್ಲಿ ಸ್ವಾಭಿಮಾನ, ದೇಶ ಭಕ್ತಿ, ಪ್ರಾಮಾಣಿಕತೆ, ಕಷ್ಟ ಸಹಿಷ್ಣುತೆ, ನಿರಂತರ ಪ್ರಯತ್ನ, ಪ್ರಗತಿಪರ ಚಿಂತನೆಗಳ ಬೆಳೆಸುವ ಒಂದು ನಿರಂತರ ಪ್ರಯತ್ನದ ಹೂಡಿಕೆಯಾಗಿದೆ. ಈ ಹೂಡಿಕೆಯ ಕಾವಲುಗಾರರೇ ಶಿಕ್ಷಕರು. ಈ ಹೂಡಿಕೆಗಳು ನಷ್ಟವಾಗದೇ ನಿರಂತರವಾಗಿ ಧನಾತ್ಮಕವಾಗಿ ಬೆಳೆಸುತ್ತಿದ್ದರೆ ನಮ್ಮ ದೇಶ ಮತ್ತು ಈ ಪ್ರಪಂಚ ಅತ್ಯಂತ ಪ್ರಶಾಂತತೆಯಿಂದ ಕೂಡಿದ ಭೂ ಸ್ವರ್ಗವಾಗುತ್ತದೆ.

ಪ್ರಸ್ತುತ ಸನ್ನಿವೇಶ ಇಂದಿನ ಕೋವಿಡ್ 19 ವೈರಸ್‌ನಿಂದಾಗಿ ತುಂಬಾ ವಿಷಮ ಪರಿಸ್ಥಿತಿಯಿಂದ ಕೂಡಿದೆ, ಹಿಂದೆಂದಿಗಿಂತಲು ಶಿಕ್ಷಕರ ಅವಶ್ಯಕತೆ ಮಕ್ಕಳಿಗೆ ಮತ್ತು ಸಮುದಾಯಕ್ಕೆ ಈಗ ಅತ್ಯಂತ ಅವಶ್ಯಕವಾಗಿದೆ, ಏಕೆಂದರೆ ಈ ಕೋವಿಡ್‌ನಿಂದಾಗಿ ರಕ್ಷಣೆ ಪಡೆಯಲು ಪ್ರಸ್ತುತ ಪರಿಸ್ಥಿತಿಯಲ್ಲಿ ಮಕ್ಕಳಿಗೆ ಮತ್ತು ಪೋಷಕರಿಗೆ ನೀವು ನೀಡುವ ತಿಳುವಳಿಕೆಯೋಂದೇ ಉತ್ತಮ ಅಸ್ತ್ರವಾಗಿದೆ. ಈ ನಿಟ್ಟಿನಲ್ಲಿ ರಾಜ್ಯಸರ್ಕಾರ, ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ಜಾರಿಗೆ ತಂದಿರುವ "ವಿದ್ಯಾಗಮ" ಎನ್ನುವ ವಿನೂತನ ಕಾರ್ಯಕ್ರಮದಲ್ಲಿ ಎಲ್ಲಾ ಶಿಕ್ಷಕ ಸಮುದಾಯದವರು ತಮ್ಮ ವೈಯಕ್ತಿಕ ಆರೋಗ್ಯದ ಕಾಳಜಿಯೊಂದಿಗೆ ಮಕ್ಕಳ ಮತ್ತು ಸಮುದಾಯದ ಆರೋಗ್ಯದ ಕುರಿತಾಗಿ ವಹಿಸ ಬೇಕಾದ ಮುಂಜಾಗ್ರತಾ ಕ್ರಮವನ್ನು ಸಮುದಾಯ ಮತ್ತು ಮಕ್ಕಳು ಹೇಗೆ ಅನುಸರಿಸಬೇಕೆಂದು ಮಾಹಿತಿ ಮತ್ತು ಶಿಕ್ಷಣ ನೀಡುವುದು ಇಂದಿನ ಅತ್ಯಂತ ತುರ್ತು ಕಾರ್ಯವಾಗಿದೆ.

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಚಿತ್ರದುರ್ಗ ಇವರು ಹೊರತರುತ್ತಿರುವ "ಶಿಕ್ಷಣವಾಣಿ" ತ್ರೈಮಾಸಿಕ ಪತ್ರಿಕೆ ನಿರಂತರವಾಗಿ ಶಿಕ್ಷಕರ ಸೃಜನಶೀಲ ಕ್ರಿಯೆಗಳಿಗೆ ವೇದಿಕೆಯಾಗಲಿ ಎಂದು ಈ ಮೂಲಕ ಆಶಿಸುತ್ತೇನೆ.

ಶ್ರೀ ಯೋಗೀಶ್ ಬಿ.
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ.

ಸಂಪಾದಕೀಯ

ಈ 2020 ವರ್ಷ ನಮಗೆಲ್ಲಾ ಹೊಸ ಅಗತ್ಯತೆ, ಹೊಸ ಜೀವನ ಶೈಲಿ ಇವುಗಳ ಪರಿಚಯ ನೀಡುತ್ತಿದೆ. ಇಷ್ಟು ದಿನಗಳ ಸಿದ್ಧ ಚಿಂತನೆಗಳಿಗೆ ತಿಲಾಂಜಲಿ ನೀಡಿ ನೂತನ ಅವಕಾಶ ಮತ್ತು ಸಾಧ್ಯತೆಗಳನ್ನು ಈ ಕಾರಿರುಳ ಮಧ್ಯೆಯೂ ನಮಗೆ ಬೆಳ್ಳಿಗೆರೆಯಂತೆ ಗೋಚರಿಸುತ್ತಿದೆ. ಕಾಣದ ಈ ಕೋವಿಡ್ 19 ವೈರಸ್ ಇಂದು ಮಾನವನನ್ನು ಅತೀ ಕುಬ್ಜನನ್ನಾಗಿಸಿದೆ, ಈ ದಿನಗಳಲ್ಲಿ ಸೂಕ್ತ ಶಿಕ್ಷಣವೊಂದೆ ನಮಗುಳಿದ ಕೊನೆಯ ಅವಕಾಶವೇನೋ ಎಂಬಂತೆ ಭಾಸವಾಗುತ್ತಿದೆ.

ಇಂತಹ ಕ್ಲಿಷ್ಟಕರ ಸಮಯದಲ್ಲಿ ನಮ್ಮೆಲ್ಲಾ ಶಿಕ್ಷಕರ ಜವಬ್ದಾರಿ ಇನ್ನೂ ಹೆಚ್ಚಿದೆ. ನಮ್ಮ ಶಾಲಾ ಮಕ್ಕಳ ಆರೋಗ್ಯದ ಜೊತೆಯಲ್ಲಿ ಶಿಕ್ಷಣದಿಂದ ವಂಚಿತರಾಗದಂತೆ ತಡೆಯುವ ಮಹತ್ತರವಾದ ಜವಾಬ್ದಾರಿ ನಮ್ಮ ಮೇಲಿದೆ.

ನಮ್ಮ ಇಲಾಖೆ ಈ ನಿಟ್ಟಿನಲ್ಲಿ ಮಹತ್ತರವಾದ ಹೆಜ್ಜೆಯನ್ನಿರಿಸಿದೆ. ಮಕ್ಕಳ ಆರೋಗ್ಯದ ಜೊತೆ ಜೊತೆಯಲ್ಲಿ ಅವರ ಶಿಕ್ಷಣಕ್ಕೆ ಯಾವುದೇ ಧಕ್ಕೆಯುಂಟಾಗದಂತೆ "ವಿದ್ಯಾಗಮ" ಎನ್ನುವ ವಿನೂತನ ಕಾರ್ಯಕ್ರಮ ಅನುಷ್ಠಾನಗೊಳಿಸಿದೆ. ಮಕ್ಕಳಿರುವಲ್ಲಿಯೇ ಶಿಕ್ಷಕರು ತೆರಳಿ ಚಿಕ್ಕ ಚಿಕ್ಕ ಗುಂಪುಗಳಿಗೆ ಕಲಿಕಾ ಚಟುವಟಿಕೆ ಹಮ್ಮಿಕೊಳ್ಳುವುದು ನಿಜಕ್ಕೂ ಒಂದು ಸಾಮಾಜಿಕ ಜವಾಬ್ದಾರಿಯ ದ್ಯೋತಕವಾಗಿದೆ.

ಈ ನಿಟ್ಟಿನಲ್ಲಿ ನಮ್ಮೆಲ್ಲಾ ಶಿಕ್ಷಕರು ಕಂಕಣಬದ್ಧರಾಗಿ ಉತ್ತಮ ಕ್ರಿಯಾಶೀಲ ಚಟುವಟಿಕೆಗಳೊಂದಿಗೆ ಮಕ್ಕಳ ನಿರಂತರ ಕಲಿಕೆ ಮತ್ತು ಮಕ್ಕಳ ಆರೋಗ್ಯಕ್ಕೆ ಸೂಕ್ತ ಸ್ಪಂದನೆ ನೀಡುತ್ತಾ ಸಾಮಾಜಿಕ ಜವಾಬ್ದಾರಿ ನಿರ್ವಹಿಸುವ ಸಮಯ ಇದೀಗ ಬಂದೊದಗಿದೆ. ನಮ್ಮ ಜಿಲ್ಲೆಯ ಬಹುಪಾಲು ಶಿಕ್ಷಕರು ತುಂಬಾ ಆಸ್ಥೆ ವಹಿಸಿ ವಿದ್ಯಾಗಮ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು ನಿಜಕ್ಕೂ ಅಭಿನಂದಾರ್ಹ ಮತ್ತು ಶ್ಲಾಘನೀಯ ಕ್ರಮವಾಗಿದೆ.

ಇದಕ್ಕೆ ಪೂರಕವಾಗಿ ಇಲಾಖೆಯು ಕಲಿಕಾ ಚಟುವಟಿಕೆಗಳ ಸುತ್ತೋಲೆಗಳನ್ನು ಕಾಲ–ಕಾಲಕ್ಕೆ ಪ್ರಕಟ ಪಡಿಸುತ್ತಿದೆ. ಈ ಸುತ್ತೋಲೆಗಳ ಅನುಸಾರ ಕಾರ್ಯನಿರ್ವಹಿಸಿ ಮಕ್ಕಳ ಶೈಕ್ಷಣಿಕ ಬುನಾದಿಯನ್ನು ಭದ್ರಗೊಳಿಸಿ ಎಂತಹ ಸಂದರ್ಭದಲ್ಲೂ ಶಿಕ್ಷಕರಾದ ನಾವು ಸಮಾಜಮುಖಿಯಾಗಿ ಕಾರ್ಯನಿರ್ವಹಿಸುವ ಮನೋಸ್ಥೈರ್ಯವನ್ನು ಸಾದರಪಡಿಸುವ ಕಾರ್ಯವಾಗಬೇಕಿದೆ.

ಶಿಕ್ಷಣವಾಣಿ ಜಿಲ್ಲೆಯ ಶೈಕ್ಷಣಿಕ ಮುಖವಾಣಿಯಾಗಿದೆ. ಶಿಕ್ಷಕರ ಪ್ರತಿಭೆಗೆ ವೇದಿಕೆಯಾಗಿದೆ ನಿರಂತರ ನೂತನ ಆವಿಷ್ಕಾರಗಳಿಗೆ ತೆರೆದುಕೊಳ್ಳುವ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಚಿತ್ರದುರ್ಗ ಇದರ ಪ್ರಕಟಣೆಯ ಹೊಣೆಹೊತ್ತಿದೆ. ಇದರ ಸದುಪಯೋಗ ಶಿಕ್ಷಣಾಸಕ್ತರಾದ ಎಲ್ಲಾ ಮಾನ್ಯರು ಬಳಸಿಕೊಳ್ಳಬೇಕೆಂದು ಸವಿನಯ ಪ್ರಾರ್ಥನೆ.

ಶ್ರೀ ರವಿಶಂಕರ ರೆಡ್ಡಿ ಕೆ.
ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ, ಚಿತ್ರದುರ್ಗ.

ಶ್ರೀ ಎಸ್.ಕೆ.ಬಿ. ಪ್ರಸಾದ್
ಉಪನಿರ್ದೇಶಕರು (ಅಭಿವೃದ್ಧಿ)
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಚಿತ್ರದುರ್ಗ.

"ಶಾಲಾ ಮುಖ್ಯಸ್ಥರು ಮತ್ತು ಶಿಕ್ಷಕರ ಸಮಗ್ರ ಮುನ್ನಡೆಗಾಗಿ ರಾಷ್ಟ್ರೀಯ ಉಪಕ್ರಮ"

ಒಂದು ಪ್ರಜ್ವಲಿಸುವ ದೀಪ ಮಾತ್ರ ಇನ್ನೊಂದು ದೀಪವನ್ನು ಬೆಳಗಿಸಬಲ್ಲದು, ಎನ್ನುವ ಮಾತಿನಂತೆ ಶಿಕ್ಷಕರಾದವರು ದೀಪದಂತೆ ಪ್ರಜ್ವಲಿಸಿದಾಗ ಮಾತ್ರ ವಿದ್ಯಾರ್ಥಿಗಳೆಂಬ ಸಾವಿರಾರು ಹಣತೆಗಳನ್ನು ಬೆಳಗಿಸಲು ಸಮರ್ಥರಾಗುವರು. ಶಿಕ್ಷಣ ಎನ್ನುವ ಕಟ್ಟಡದ ಮುಖ್ಯ ಸ್ಥಂಭವಾಗಿರುವವರು ಶಿಕ್ಷಕರು ಶಿಕ್ಷಣವೆಂಬುವುದು ಮಾನವನೊಳಗೆ ಹುದುಗಿರುವ ಪರಿಪೂರ್ಣತೆಯನ್ನು ವ್ಯಕ್ತಗೊಳಿಸುವ ಪ್ರಯತ್ನ ಎಂಬ ವಿವೇಕಾನಂದರ ವಾಣಿಯನ್ನು ಅರ್ಥಮಾಡಿಕೊಂಡು ಮೊದಲು ಅವರ ಪರಿಪೂರ್ಣತೆ ಪಡೆದಾಗ ಮಾತ್ರ ಈ ಪ್ರಯತ್ನ ಸಾಕಾರಗೊಳ್ಳಲು ಸಾಧ್ಯ.

ಈ ನಿಟ್ಟಿನಲ್ಲಿ ನಮ್ಮ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ಎನ್.ಸಿ.ಇ.ಆರ್.ಟಿ ನವದೆಹಲಿ ಹಾಗೂ ಕರ್ನಾಟಕ ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಒಟ್ಟುಗೂಡಿ ಶಿಕ್ಷಕರ ಸಮಗ್ರ ಅಭಿವೃದ್ಧಿ ಹಾಗೂ ಮುನ್ನಡೆಗಾಗಿ ಹೊರತಂದಿರುವ ಒಂದು ವಿಶಿಷ್ಟ ಹಾಗೂ ವಿಸ್ತೃತ ವಿನ್ಯಾಸವೇ ಈ ನಿಷ್ಠಾ ತರಬೇತಿಯಾಗಿದೆ.

ಈ ಅಧ್ಯಯನದ ಪ್ಯಾಕೇಜಿನಲ್ಲಿ 07 ಜೆನೆರಿಕ್ ಮಾಡ್ಯೂಲ್‌ಗಳು 05 ವಿಷಯಾಧಾರಿತ ಮಾಡ್ಯೂಲ್‌ಗಳು ಹಾಗೂ ನಾಯಕತ್ವ ಅಭಿವೃದ್ಧಿ ಮಾಡ್ಯೂಲ್ ಒಟ್ಟಾರೆಯಾಗಿ 18 ಕೋರ್ಸ್‌ಗಳನ್ನು ಒಳಗೊಂಡ ಅತ್ಯಂತ ಸುವ್ಯವಸ್ಥಿತವಾಗಿ ತಯಾರಿಸಿ ಜೋಡಿಸಿದ ಜ್ಞಾನದ ನೆಲೆ ಇದೆ. ಈ ಎಲ್ಲಾ ಕೋರ್ಸುಗಳನ್ನು ಪ್ರತೀ ಶಿಕ್ಷಕರೂ ಪಡೆದುಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಈ ನಿಷ್ಠಾ ತರಬೇತಿ ಯೋಜನೆಯು ದೇಶಾದ್ಯಂತ ಸುಮಾರು 42 ಲಕ್ಷ ಶಿಕ್ಷಕರನ್ನು ತಲುಪುವ ಗುರಿಯೊಂದಿಗೆ ಆರಂಭವಾಗಿರುತ್ತದೆ. ಅದರಂತೆ ನಮ್ಮ ರಾಜ್ಯದ ಸುಮಾರು 1 ಲಕ್ಷ 52 ಸಾವಿರ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ತಲುಪಿಸುವ ಗುರಿಯನ್ನು ನಮ್ಮ ಶಿಕ್ಷಣ ಇಲಾಖೆ ವಹಿಸಿಕೊಂಡಿರುತ್ತದೆ. ಈ ಕಾರ್ಯಭಾರವನ್ನು ರಾಜ್ಯ ಹಂತದಲ್ಲಿ ಎಸ್.ಎಸ್.ಕೆ ಹಾಗೂ ಡಿ.ಎಸ್.ಇ.ಆರ್.ಟಿ ವಿಭಾಗೀಯ ಹಂತದಲ್ಲಿ ಸಿ.ಟಿ.ಇ ರವರು ಜಿಲ್ಲಾಹಂತದಲ್ಲಿ ಡಯಟ್ ಸಂಸ್ಥೆಯವರು ವಹಿಸಿಕೊಂಡಿದ್ದು ಪ್ರತೀ ತಾಲ್ಲೂಕು ಹಂತದಲ್ಲಿ ಒಬ್ಬರು ಎಸ್.ಆರ್.ಪಿ ಹಾಗೂ 6 ಜನ ಕೆ.ಆರ್.ಪಿ ಗಳನ್ನು ಒಳಗೊಂಡ ಸುಸಜ್ಜಿತ ತಂಡವನ್ನು ರಚಿಸಿಕೊಂಡು ವ್ಯವಸ್ಥಿತವಾಗಿ ತರಬೇತಿಯ ಅನುಷ್ಠಾನವನ್ನು ಮಾಡಲಿಕ್ಕಾಗಿ ಈ ತಂಡದವರಿಗೆ ಈಗಾಗಲೇ ನೇರವಾಗಿ ಎನ್.ಸಿ.ಇ.ಆರ್.ಟಿ ಸಂಪನ್ಮೂಲ ವ್ಯಕ್ತಿಗಳಿಂದಲೇ ತರಬೇತಿಯನ್ನು ನೀಡಿ ಯಶಸ್ವಿಗೊಳಿಸಲಾಗಿರುತ್ತದೆ. ಅದರಂತೆ ಪ್ರತೀ ತಂಡವು ತಮ್ಮ ಬ್ಲಾಕ್ ಹಂತದಲ್ಲಿ ಬರುವ ಎಲ್ಲಾ ಶಿಕ್ಷಕರನ್ನೊಳಗೊಂಡಂತೆ ತಂಡಗಳನ್ನು ವಿಭಾಗಿಸಿಕೊಂಡು ಪೂರ್ವತಯಾರಿ ಮಾಡಿಕೊಂಡಂತಾಗಿತ್ತು. ಆದರೆ ಈ ಸಮಯದಲ್ಲಿ ಕೋವಿಡ್–19 ಮಹಾಮಾರಿ ಇಡೀ ವಿಶ್ವವನ್ನೇ ವ್ಯಾಪಿಸಿ ಮಾನವನ ಎಲ್ಲಾ ಚಟುವಟಿಕೆಗಳ ಮೇಲೆ ನಿರ್ಬಂಧ ಹೇರಿ ಅಟ್ಟಹಾಸ ಮೆರೆದಿದ್ದು ನಮಗೆಲ್ಲಾ ತಿಳಿದ ಸಂಗತಿಯಾಗಿದೆ.

ಇಂತಹ ವಿಷಮ ಪರಿಸ್ಥಿತಿಯಲ್ಲಿ ಮುಖಾ–ಮುಖಿ ತರಬೇತಿ ಆಯೋಜಿಸುವುದು ಅಪಾಯವನ್ನು ಆಹ್ವಾನಿಸಿದಂತಾಗುತ್ತದೆ ಎಂದರಿತ ಇಲಾಖೆಯು ಇಂತಹ ದುಸ್ಸಾಹಸಕ್ಕೆ ಕೈಹಾಕದೇ ಗಂಭೀರವಾಗಿ ಆಲೋಚಿಸಿ ತನ್ನಲ್ಲಾ ಹಳೆಯ ತಯಾರಿಯನ್ನು ಬದಿಗಿರಿಸಿ ಹೊಸದೇ ಆದಂತಹ ಆಲೋಚನೆ ಹಾಗೂ ಪರಿಕಲ್ಪನೆಯೊಂದಿಗೆ ಜಾರಿಗೆ ತಂದದ್ದೇ ಈ ಆನ್‌ಲೈನ್ ತರಬೇತಿ (ಸ್ವ ಕಲಿಕೆ).

ಇದೇ ನವೆಂಬರ್ 3 ರಿಂದ ಆರಂಭವಾಗಿರುವ ಅಧ್ಯಯನವು ಮುಂದಿನ ಫೆಬ್ರವರಿಯ ವರೆಗೆ ಸಾಗಿ ಶಿಕ್ಷಕರಿಗೆ ಜ್ಞಾನದ ರಸದೌತಣವನ್ನು ಉಣ ಬಡಿಸುವಲ್ಲಿ ಯಶಸ್ವಿಯಾದಾಗ ಇದರ ಹಿಂದೆ ಶ್ರಮವಹಿಸಿದ ಅಸಂಖ್ಯಾತ ಕೈಗಳಿಗೆ ನಿಜವಾಗಲೂ ಧನ್ಯತೆಯ ಭಾವ ಮೂಡಲಿದೆ.

ದೀಕ್ಷಾ ಎಂಬ ವಿಶಿಷ್ಟವಾದ ಪೋರ್ಟಲ್‌ನಲ್ಲಿ ಪ್ರತೀ ಶಿಕ್ಷಕರು ತಮ್ಮದೇ ಐ.ಡಿಯೊಂದಿಗೆ ಪ್ರತಿಯೊಂದು ಕೋರ್ಸ್‌ಅನ್ನು ಸ್ವ ಅಧ್ಯಯನ ಮಾಡುವ ಪ್ರಕ್ರಿಯೆ ಇದಾಗಿದೆ. ಈ ಹಂತದಲ್ಲಿ ಪ್ರತೀ ಶಿಕ್ಷಕರ ಅಧ್ಯಯನ ಮಾಡುವ ಪ್ರಕ್ರಿಯೆ ಇದಾಗಿದ್ದು ಈ ಹಂತದಲ್ಲಿ ಪ್ರತೀ ಶಿಕ್ಷಕರ ಅಧ್ಯಯನದ ಪ್ರಗತಿಯ ದಾಖಲೆಯನ್ನು ಬ್ಲಾಕ್‌ಹಂತದಿಂದ ಹಿಡಿದು ರಾಜ್ಯ ಹಂತದವರೆಗೆ ಮೇಲ್ವಿಚಾರಣೆ ಮಾಡುವ ತೊಂದರೆಗಳನ್ನು ನಿರ್ವಹಿಸುವ ಹೆಚ್ಚಿನ ಮಾರ್ಗದರ್ಶನಮಾಡುವ ವಿಶೇಷವಾದ ವ್ಯವಸ್ಥೆಯೊಂದಿಗೆ ಸೂಕ್ತವಾದ ಕಾಲಮಿತಿಯನ್ನೊಳಗೊಂಡ ಸಮಗ್ರ ವೇಳಾಪಟ್ಟಿಯಂತೆ ಈ ಮಹಾನ್ ಕಾರ್ಯ ಪ್ರಗತಿಯಲ್ಲಿದೆ.

"ಚಿತ್ತವಿಲ್ಲದೆ ಗುಡಿಯ ಸುತ್ತಿದೊಡೆ ಫಲವೇನು ಎತ್ತು ಗಾಣವನು ಹೊತ್ತು ತಾ ನಿತ್ಯದಲ್ಲಿ ಸುತ್ತಿಬಂದಂತೆ" ಎಂಬ ಸರ್ವಜ್ಞನ ನುಡಿಯಂತೆ ವೃತ್ತಿಯಲ್ಲಿ ಚಿತ್ತವಿರಬೇಕಾದದ್ದು ನಮ್ಮ ಕರ್ತವ್ಯ. "ಉಸಿರಾಡುವವರೆಗೂ ಕಲಿಕೆ, ಜ್ಞಾನಾರ್ಜನೆಯೇ ಜೀವನದ ಗುರಿಯಾಗಲಿ" ಎಂಬ ವಿವೇಕವಾಣಿ ಎಷ್ಟು ಸರ್ವಕಾಲಿಕ ಸತ್ಯವಾಗಿದೆ ಇದರಂತೆ ಎಲ್ಲಾ ಶಿಕ್ಷಕರೂ ಈ ಅಧ್ಯಯನದಲ್ಲಿ ತೊಡಗಿಕೊಂಡು "ಸಾಕ್ಷಿಯಾಗಿ ಮಾಡುವ ಕೆಲಸಕ್ಕಿಂತ ನಮ್ಮ ಆತ್ಮ ಸಾಕ್ಷಿಯಾಗಿಮಾಡುವ ಕೆಲಸ ಕಾಯಕ ಪೀತಿಯನ್ನು ಹಾಗೂ ವೃತ್ತಿಗೌರವವನ್ನು ತಂದುಕೊಡುತ್ತದೆ." ಎಂದು ಹೇಳುತ್ತಾ ಎಲ್ಲರೂ "ನಿಷ್ಠಾ" ತರಬೇತಿಯಲಲ್ಲಿ ಅತ್ಯಂತ ನಿಷ್ಟೆಯಿಂದ ಪಾಲ್ಗೊಂಡಾಗ ಮಾತ್ರ ನಮ್ಮ ಇಲಾಖೆಯ ಹಾಗೂ ಎನ್.ಸಿ.ಇ.ಆರ್.ಟಿ ಯವರ ಸದಾಶಯ ಈಡೇರಿಸಿದಂತಾಗುತ್ತದೆ ಎಂದು ಹೇಳಬಹುದಾಗಿದೆ.

"ಜೈ ನಿಷ್ಠಾ"

ರಾಜು ಎಂ. ಡಿ.

ಸಿ.ಆರ್.ಪಿ ಅಂದನೂರು

"ಕೊರೋನಾ ಸಮಯದಲ್ಲಿ ಅತ್ಯುತ್ತಮ ನಲಿ-ಕಲಿ ತರಗತಿ ಕೋಣೆ ನಿರ್ಮಿಸಿರುವ ಶಿಕ್ಷಕರು"

"ಬತ್ತಿ ಉರಿದು ಕತ್ತಲೋಡಿಸಿತು,
ಬಳಪ ಬರೆದು ಅಕ್ಷರ ಮೂಡಿಸಿತು,
ಉರಿದು ಹೋಯಿತು ಬತ್ತಿ,
ಕತ್ತಲು ಮತ್ತೆ ಆವರಿಸಿತು,
ಸವೆದು ಹೋಯಿತು ಬಳಪ ಅಕ್ಷರ ಭಾಗ್ಯ ಶಾಶ್ವತವಾಗಿ ಉಳಿಯಿತು ಮಕ್ಕಳ ಮನದಲ್ಲಿ"

ಎಂಬ ಜರಗನಹಳ್ಳಿ ಶಿವಶಂಕರವರ ಹನಿಗವನದನ್ವಯ ಈ ಶಾಲೆಯ ಶಿಕ್ಷಕರು ಕಾರ್ಯನಿರ್ವಹಿಸಿರುವ ನಿದರ್ಶನ ಸ.ಹಿ.ಪ್ರಾ. ಶಾಲೆ ಕೊಡಗವಳ್ಳಿಹಟ್ಟಿ, ಹೊಳಲ್ಕೆರೆ ತಾಲ್ಲೂಕು ಚಿಕ್ಕಮ್ಮಿಗನೂರು ಕ್ಲಸ್ಟರ್‌ನಲ್ಲಿದೆ. ಈ ಗ್ರಾಮದಲ್ಲಿ ಪ.ಜಾತಿ/ಪ.ವರ್ಗ ಜನಾಂಗದವರು ವಾಸವಾಗಿರುವ.....?

ಇಲ್ಲಿನ ನಮ್ಮ ಶಾಲೆಯು ಮೊದಲಿನಿಂದಲೂ ಮೂಲಭೂತ ಸೌಕರ್ಯ ಹಾಗೂ ಭೌತಿಕ ಸೌಕರ್ಯದಿಂದ ವಂಚಿತವಾಗಿದ್ದು, 2019-20ನೇ ಸಾಲಿನ ಎರಡು ಹೊಸ ಹೆಚ್ಚುವರಿ ಕೊಠಡಿಗಳು ನಿರ್ಮಾಣಗೊಂಡಿದ್ದು ನಮ್ಮ ಸೌಭಾಗ್ಯ. ಈ ಹೊಸ ಕೊಠಡಿಯಲ್ಲಿ ಮಾದರಿ ನಲಿ-ಕಲಿ ಕೊಠಡಿಯನ್ನಾಗಿ ಮಾಡಲು ನಮ್ಮ ಸಹ ಶಿಕ್ಷಕರ ವೃಂದದವರು ಸೇರಿ ಒಂದು ಯೋಜನೆಯನ್ನು ರೂಪಿಸಿದೆವು. ಈ ಯೋಜನೆಗೆ ಸುಮಾರು 13,000/- ರೂಗಳ ಯೋಜನೆ ತಯಾರಿಸಿದೆವು. 2020-21 ನೇ ಸಾಲಿನಲ್ಲಿ ಶಾಲೆಗೆ ಯಾವುದೇ ಅನುದಾನ ಬಿಡುಗಡೆಯಾಗದ ಹಾಗೂ ಕೋವಿಡ್-19 ರ ಹಿನ್ನೆಲೆಯ ಹಾಗೂ ಈ ಸಂದರ್ಭದಲ್ಲಿ ಗ್ರಾಮಸ್ಥರ, ದಾನಿಗಳಿಂದ ನೆರವು ಪಡೆಯುವುದು ಅಸಾಧ್ಯವಾದ ಮಾತಾಗಿತ್ತು. ಆದರೂ ನಾವುಗಳು ರೂಢಿಸಿದ ಈ ಯೋಜನೆಯು ಹಾಗೆಯೇ ಉಳಿಯಬಾರದೆಂದು ಎಲ್ಲರೂ ಚರ್ಚಿಸಿ ನಮ್ಮ ಶಾಲೆಯಲ್ಲಿರುವ 4 ಜನ ಸಹಶಿಕ್ಷಕರು 1,000/- ರೂಗಳಂತೆ ಮುಖ್ಯೋಪಾಧ್ಯಾಯರಾದ ನಾವು 4,000 ರೂಗಳನ್ನು ನಮ್ಮ ಸ್ವಂತ ಹಣದಿಂದ ಈ ಕೆಲಸ ಪ್ರಾರಂಭಿಸಿದೆವು. ನಲಿ-ಕಲಿ ಈ ಕೊಠಡಿಗೆ ಸುಂದರವಾದ ಗೋಡೆ ಬರಹ, ಅತ್ಯುತ್ತಮ ಕಲಿಕಾ ಚಪ್ಪರ ಹಾಗೂ ಕಲಿಕೆಗೆ ಬೇಕಾದ ಕಲಿಕೋಪಕರಣಗಳು ತಯಾರಿಸಿ ಕೊಠಡಿಯನ್ನು ತುಂಬಾ ಸುಂದರವಾಗಿ ಶೃಂಗಾರಗೊಳಿಸಲಾಯಿತು. ಅತ್ಯುತ್ತಮವಾಗಿ ಆಕರ್ಷಕವಾಗಿ ಹಾಗೂ ಸುಸಜ್ಜಿತವಾದ ಮಾದರಿ ನಲಿ-ಕಲಿ ಕೊಠಡಿಯ ಕಾರ್ಯ ಸಂಪೂರ್ಣವಾಗಿ ಪೂರ್ಣಗೊಳಿಸುವಲ್ಲಿ ನಮ್ಮ ಪೂರ್ವಯೋಜನೆಯಂತೆ 12,500/- ರೂ. ಗಳು ವೆಚ್ಚವಾಗಿರುತ್ತದೆ.

ಕೋವಿಡ್-19 ಹಿನ್ನೆಲೆಯಲ್ಲಿ ತರಗತಿಗಳು ಪ್ರಾರಂಭವಾಗದ ಸಂದರ್ಭದಲ್ಲಿ ಈ ಅಮೂಲ್ಯ ಸಂದರ್ಭವನ್ನೇ ನಮ್ಮೆಲ್ಲ ಸಹ ಶಿಕ್ಷಕರು ಹಾಗೂ ಮುಖ್ಯವಾಗಿ ನಲಿ-ಕಲಿ ತರಗತಿಯ ಶಿಕ್ಷಕಿ ಇವರೆಲ್ಲರೂ ಸೇರಿ ಸಮಯದ ಸದುಪಯೋಗ ಮಾಡಿಕೊಂಡು ಈ ಕೆಲಸವನ್ನು ಪೂರ್ಣಗೊಳಿಸುತ್ತಾರೆ. ಈ ಸುಂದರ ಹಾಗೂ ಸುಸಜ್ಜಿತವಾದ ನಲಿ-ಕಲಿ ಕೊಠಡಿಯ ತಯಾರಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲರನ್ನೂ ಸ್ಮರಿಸುತ್ತೇವೆ ಅದರಲ್ಲಿಯೂ ಮುಖ್ಯವಾಗಿ ನಮ್ಮ ಕ್ಲಸ್ಟರ್‌ನ ಸಂಪನ್ಮೂಲ ವ್ಯಕ್ತಿಗಳ ಉತ್ತೇಜನ ಹಾಗೂ ಮಾರ್ಗದರ್ಶನದಿಂದ ಸಾಕಾರಗೊಂಡಿರುವ ಕಾರ್ಯದಿಂದ ನಲಿ-ಕಲಿ ಕೊಠಡಿ ಬಳಕೆಗೆ ಸಿದ್ಧವಾಗಿ ಆಕರ್ಷಣೀಯವಾಗಿ ಕಾಣುವುದರಿಂದ ಪಾಲಕರನ್ನು ನಮ್ಮ ಸರ್ಕಾರಿ ಶಾಲೆಗೆ ಕೈಬೀಸಿ ಕರೆಯುವಂತಾಗಿದೆ. ಈ ಮಾದರಿ ನಲಿ ಕಲಿ ಕೊಠಡಿ ನಿರ್ಮಾಣಗೊಳ್ಳಲು ಸಹಕಾರ ಹಾಗೂ ಪ್ರೋತ್ಸಾಹ ನೀಡಿದವರೆಲ್ಲರನ್ನು ತುಂಬು ಹೃದಯದಿಂದ ಸ್ಮರಿಸುತ್ತೇವೆ.

ಸಿ.ಆರ್.ಪಿ. ವರದಿ

ಚಿತ್ರದುರ್ಗ ಜಿಲ್ಲೆಯಿಂದ 55 ಕಿ.ಮೀ ಹೊಳಲ್ಕೆರೆ ತಾಲ್ಲೂಕಿನಿಂದ 15 ಕಿ.ಮೀ ಚಿಕ್ಕೆಮ್ಮಿಗನೂರು ಕ್ಲಸ್ಟರ್ ಕೇಂದ್ರದಿಂದ 3. ಕಿ.ಮೀ. ದೂರದಲ್ಲಿರುವ ಈ ಕುಗ್ರಾಮ ಕೊಡಗವಳ್ಳಿಹಟ್ಟಿ ಸ.ಹಿ.ಪ್ರಾ.ಶಾಲೆಯ ನಲಿ–ಕಲಿ ಕೊಠಡಿ ನೋಡಿದರೆ ಮನಸ್ಸು ಹೃದಯ ಹೂವಿನಂತೆ ಅರಳುತ್ತದೆ. ಈ ಶಾಲೆಯ ಮುಖ್ಯ ಶಿಕ್ಷಕರಾದ ರೇವಣಪ್ಪ.ಎನ್, ನಲಿ–ಕಲಿ ಶಿಕ್ಷಕಿಯಾದ ಕಾಮಾಕ್ಷಿ ಕೆ.ಆರ್. ಸಹ ಶಿಕ್ಷಕರಾದ ಶಂಭುಲಿಂಗಪ್ಪ, ಸತೀಶ್, ತುಂಗಮ್ಮ ಈ ಎಲ್ಲಾ ಶಿಕ್ಷಕರ ಸಹಕಾರ ತನು,ಮನ,ಧನ ಅರ್ಪಿಸಿ ಈ ಸುಂದರ ನಲಿ–ಕಲಿ ಕೊಠಡಿ, ಕಲಿಕಾ ಚಪ್ಪರ ತಾಲ್ಲೂಕಿನಲ್ಲೇ ಮಾದರಿಯಾಗಿ ನಿರ್ಮಿಸಿರುವುದನ್ನು ಶ್ಲಾಘಿಸಲಾಗಿದೆ.

ನಮ್ಮ ತಾಲ್ಲೂಕಿನ ಶೈಕ್ಷಣಿಕ ಅಭಿವೃದ್ಧಿಗಾಗಿ ಉತ್ತಮ ಆಡಳಿತ ನೀಡುತ್ತಿರುವ ನನ್ನ ನೆಚ್ಚಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಯುತ ಸಿ. ಎಂ. ತಿಪ್ಪೇಸ್ವಾಮಿ ಸರ್ ರವರು ಸದರಿ ಶಾಲೆಗೆ ಖುದ್ದು ಭೇಟಿ ನೀಡಿ ಮಾದರಿ ಶಾಲೆಯೆಂದು ದೃಢೀಕರಿಸಿ ಸಿಬ್ಬಂದಿ ವರ್ಗವನ್ನು ಪ್ರಶಂಸಿಸಿರುತ್ತಾರೆ. ಪ್ರಭಾರಿ ಬಿ.ಆರ್.ಸಿಯವರಾದ ಎಂ.ವಿ. ತಿಪ್ಪೇಸ್ವಾಮಿ ಸರ್ ರವರ ಸಲಹೆ ಹಾಗೂ ನೋಡಲ್ ಬಿ.ಆರ್.ಪಿಯವರಾದ ಶಾಂತ್‌ಕುಮಾರ್ ಬಿ.ಜಿ. ರವರು ಭೇಟಿ ನೀಡಿ ಈ ಮಾದರಿ ಶಾಲೆ ನಿರ್ಮಾಣ ಮಾಡಲು ಎಲ್ಲಾ ತರದ ಸಹಕಾರ ನೀಡಿರುವುದರಿಂದ ಈ ಎಲ್ಲಾ ಮೇಲಾಧಿಕಾರಿಗಳಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

"ಇಚ್ಛೆಯಿರುವ ಶಿಕ್ಷಕರಿದ್ದರೆ, ಏನನ್ನಾದರೂ ಸಾಧಿಸಿ ತೋರಿಸಲು ಈ ಶಾಲೆಯ ಶಿಕ್ಷಕರೇ ಮಾದರಿ"

ಇಂದ

ರಾಘವೇಂದ್ರ.ಟಿ.ಎಂ

ಸ.ಹಿ.ಪ್ರಾ.ಶಾಲೆ ಕೊಡಗವಳ್ಳಿಹಟ್ಟಿ ಚಿಕ್ಕೆಮ್ಮಿಗನೂರು ಕ್ಲಸ್ಟರ್ ವ್ಯಾಪ್ತಿಯ ಈ ಶಾಲೆಯ ಮುಖ್ಯ ಶಿಕ್ಷಕರು ಮತ್ತು ಸಹ ಶಿಕ್ಷಕರ ತಂಡದ ಕಾರ್ಯನಿರ್ವಹಣೆ ಉತ್ತಮವಾಗಿದ್ದು ಸಹಕಾರ ಸಮನ್ವಯತೆಯಿಂದ ಶೈಕ್ಷಣಿಕ ಪ್ರಗತಿಗೆ ಶ್ರಮಿಸುತ್ತಿದ್ದಾರೆ. ಸಿ.ಆರ್.ಪಿ ಶ್ರೀ ರಾಘವೇಂದ್ರ ರವರ ಮಾರ್ಗದರ್ಶನದಿಂದ ಈ ಶಾಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅನುಷ್ಠಾನ ಮತ್ತು ಕಲಿಕಾ ಪ್ರಗತಿ ಪ್ರಶಂಸನೀಯವಾಗಿದೆ.

ಇಂದ

ಎಂ.ವಿ.ತಿಪೇಸ್ವಾಮಿ

ಪ್ರ. ಕ್ಷೇತ್ರ ಸಮನ್ವಯಾಧಿಕಾರಿ

ಹೊಳಲ್ಕೆರೆ

ವಿದ್ಯಾಗಮ ನಿರಂತರ ಕಲಿಕಾ ಕಾರ್ಯಕ್ರಮ
ಹೊಳಲ್ಕೆರೆ ತಾಲ್ಲೂಕಿನಲ್ಲಿ ಶೈಕ್ಷಣಿಕ ಪ್ರಗತಿಯ ಸಾಧನೆ

ಶಿಕ್ಷಣ ಎಲ್ಲರಿಗೂ ಎಲ್ಲೆಡೆ ಎಂಬ ಧ್ಯೇಯೋದ್ದೇಶದ ಸಾಕಾರಕ್ಕೆ ವಿದ್ಯಾಮಗ ಎಂಬ ಭೂತಪೂರ್ವ ಸರ್ಕಾರಿ ಪ್ರಾಯೋಜಿತ ಶಿಕ್ಷಣ ಇಲಾಖೆಯ ಕಾರ್ಯಕ್ರಮ ಬಹಳಷ್ಟು ನೆರವು ನೀಡಿತು ಮಾರ್ಚ 2020 ರಿಂದ ಕೋವಿಡ್ 19 ವೈರಸ್ ಸಾಂಕ್ರಾಮಿಕವಾಗಿ ಭಾರತದುದ್ದಗಲದಲ್ಲಿ ಹಬ್ಬುತ್ತ ತನ್ನ ಕರಾಳ ಕಬಂಧ ಬಾಹುಗಳ ಮೂಲಕ ಬಾಲವೃದ್ದರಾದಿಯಾಗಿ ಎಲ್ಲರನ್ನೂ ರೋಗಪೀಡಿತರಾಗಿಸುತ್ತಿತ್ತು ತಕ್ಷಣ ಮುಂಜಾಗ್ರತೆ ತೆಗೆದುಕೊಂಡ ಘನ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೆಚ್ಚಿನ ಜೀವಹಾನಿ ತಪ್ಪಿಸಲು ಮತ್ತು ಸಾರ್ವಜನಿಕರ ಆರೋಗ್ಯದ ಹಿತ ಕಾಯಲು ಲಾಕ್‌ಡೌನ್ ಜಾರಿಗೊಳಿಸಿತು. ಇದು ಶಿಕ್ಷಣ ಸಂಬಂಧಿಯಾದ ಎಲ್ಲ ಸಂಸ್ಥೆಗಳನ್ನು ಮುಚ್ಚುವಂತೆ ಮಾಡಿದ್ದಲ್ಲದೇ ಪ್ರಾಥಮಿಕ ಹಂತದಿಂದ ಎಲ್ಲ ಹಂತದ ಶಿಕ್ಷಣ ಸಂವಹನಗಳನ್ನು ನಿಲುಗಡೆಗೊಳಿಸಿತು. ಒಂದು ಕಡೆ ಎಲ್ಲ ಔದ್ಯೋಗಿಕ ಚಟುವಟಿಕೆಗಳು ನಿಂತ ಪರಿಣಾಮ ಬಹುಪಾಲು ಜನರ ಆದಾಯದ ಮೂಲಗಳೇ ನಿಂತುಹೋದವು. ಇನ್ನೊಂದುಕಡೆ ಶೈಕ್ಷಣಿಕ ಚಟುವಟಿಕೆಗಳು ನಿಂತ ಪರಿಣಾಮ ದೇಶದ ಎಲ್ಲ ವರ್ಗದ ಮಕ್ಕಳು ಮನೆಯಲ್ಲಿಯೇ ಉಳಿಯಬೇಕಾಯಿತು. ಇದೊಂದು ರೀತಿಯಲ್ಲಿ ನಿರಂತರ ಜ್ಞಾನ ಪ್ರಸಾರವನ್ನೇ ಕಡಿತಗೊಳಿಸಿದಂತಾಗಿದ್ದು ಸುಳ್ಳಲ್ಲ.

ದುರ್ಬರವಾದ ಇಂತಹ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಜುಲೈ 2020ರ ಮೊದಲ ವಾರದಿಂದ ವಿದ್ಯಾಗಮ ಎಂಬ ಶೈಕ್ಷಣಿಕ ಕಾರ್ಯ ಯೋಜನೆಯನ್ನು ಜಾರಿಗೊಳಿಸಿತು. ಕರೋನಾ ಸಾಂಕ್ರಾಮಿಕ ಕಾಲದಲ್ಲಿ ಮುಚ್ಚಿದ ಶಾಲೆಗಳಿಗೆ ಬಾರದ ಮಕ್ಕಳು ಇದ್ದಲ್ಲೇ ಶಿಕ್ಷಣ ಮುಂದುವರೆಸಲು ಒಂದಷ್ಟು ನೆರವು ನೀಡುವ ಕಾರ್ಯತಂತ್ರ ಇದಾಗಿತ್ತು. ರಾಜ್ಯದ ಪ್ರತಿ ಜಿಲ್ಲೆ ಹಾಗೂ ತಾಲ್ಲೂಕು ಮತ್ತು ಹಳ್ಳಿಗಳಲ್ಲಿ ಸರ್ಕಾರಿ ಸಾರ್ವಜನಿಕ ಶಾಲೆಗಳು ಇದ್ದು ಲಕ್ಷಾಂತರ ಖಾಯಂ ಶಿಕ್ಷಕ ಸಿಬ್ಬಂದಿ ಇದ್ದು ಅವರುಗಳ ಮೂಲಕ ಸಮರ್ಥವಾಗಿ ಮಕ್ಕಳಿಗೆ ನಿರಂತರ ಕಲಿಕೆಯ ಮಾರ್ಗದರ್ಶನ ಪ್ರಾರಂಭಿಸಲಾಯಿತು. ಅದರಂತೆ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನಲ್ಲೂ ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ ಮತ್ತು ಕ್ಷೇತ್ರ ಸಂಪನ್ಮೂಲ ಕೇಂದ್ರದ ಅಧಿಕಾರಿಗಳು ಮತ್ತು ಸಂಪನ್ಮೂಲ ವ್ಯಕ್ತಿಗಳು ಹಾಗೂ ಎಲ್ಲ ಹಂತದ ಶಿಕ್ಷಕರು ಅವಿರತವಾಗಿ ಪರಿಶ್ರಮಿಸಿ ವಿದ್ಯಾಗಮ ಯೋಜನೆಯನ್ನು ಕಾರ್ಯಗತಗೊಳಿಸಿ ತಾಲ್ಲೂಕಿನ ಕಲಿಕ ಚಿಣ್ಣರ ನಿರಂತರ ಗುಣಾತ್ಮಕ ಶೈಕ್ಷಣಿಕ ಬೆಳವಣಿಗೆಗೆ ಕಾರಣವಾಗಿರುವುದು ಶಿಕ್ಷಣ ಇಲಾಖೆಯ ಶ್ರೇಯಸ್ಸಾಗಿದೆ.

ವಿದ್ಯಾಗಮ ಕಲಿಕೆಯ ನಿರಂತರತೆಯ ಕಾರ್ಯಕ್ರಮ :

2020-21ರ ಶೈಕ್ಷಣಿಕ ವರ್ಷದ ಪಠ್ಯಕ್ರಮದಂತೆ ಮನೆಯಲ್ಲಿ ಇರುವ ಮಕ್ಕಳಿಗೆ ಶಿಕ್ಷಕರ ಮೂಲಕ ನಿತ್ಯ ನಿರಂತರ ಮಾರ್ಗ ದರ್ಶನ ಮಾಡುವುದು ಯೋಜನೆಯ ಪ್ರಮುಖ ಅಂಶ. ಪಠ್ಯಪುಸ್ತಕಗಳನ್ನು ಹಾಗೂ ಅಭ್ಯಾಸ ಪುಸ್ತಕಗಳನ್ನು ಜೂನ್ 2020ರ ಮಾಹೆಯಲ್ಲೇ ಮಕ್ಕಳ ಮನೆ ಮನೆಗೆ ಶಿಕ್ಷಣ ಇಲಾಖೆ ವ್ಯವಸ್ಥಿತವಾಗಿ ತಲುಪಿಸಿತು. ಅವುಗಳನ್ನು ಕ್ರಮಬದ್ದವಾಗಿ ಓದುವ ಅರ್ಥ ಮಾಡಿಸುವ ಕಾರ್ಯಕ್ಕೆ ಸಮಗ್ರ ರೂಪರೇಷೆಗಳನ್ನು ವಿದ್ಯಾಗಮದ ಮೂಲಕ ಹಮ್ಮಿಕೊಳ್ಳಲಾಯಿತು.

ಕಾಲ್ಪನಿಕ ಕಲಿಕಾ ಕೋಣೆಗಳ ರಚನೆ :

ಸರ್ಕಾರದ ಸಾಮಾಜಿಕ ನಿರ್ಬಂಧಗಳಿರುವ ಕಾರಣ ಶಾಲೆಗಳಲ್ಲಿ ತರಗತಿಗಳು ನಡೆಯುವಂತಿರಲಿಲ್ಲ ಹಾಗಾಗಿ ಮೂರು ರೀತಿಯ ಕಾಲ್ಪನಿಕ ಕೋಣೆಗಳನ್ನು ರಚಿಸಿಕೊಂಡು ಅದರಂತೆ ಕಾರ್ಯಾಚರಿಸಲಾಯಿತು. ಮೊದಲನೆಯ ಕೋಣೆಯಲ್ಲಿ ಅಂತರ್ಜಾಲದ ಸೌಲಭ್ಯ ಹೊಂದಿದ್ದು ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್ ಹೊಂದಿರುವ ಪೋಕರ ಮಕ್ಕಳಿಗೆ ಆನ್‌ಲೈನ್ ಮೂಲಕ ಮತ್ತು ವಾಟ್ಸಪ್ ಮೂಲಕ ಪಾಠಗಳ ಓದು ಹಾಗೂ ಬರಹಕ್ಕ ಮಾರ್ಗದರ್ಶನ ನೀಡಲಾಯಿತು. ಎರಡನೆಯ ಕೋಣೆಯ ಮೂಲಕ ಫೋನ್ ಇದ್ದು ಅಂತರ್ಜಾಲ ಸೌಲಭ್ಯ ಇಲ್ಲದವರಿಗೆ ಮೆಸೇಜ್ ಮೂಲಕ ಮತ್ತು ಕರೆ ಮಾಡುವ ಮೂಲಕ ಪಠ್ಯ ಪುಸ್ತಕ ಓದು ಅಭ್ಯಾಸ ಪುಸ್ತಕ ಬರವಣಿಗೆಗೆ ಸಲಹೆಗಳನ್ನು ನೀಡಲಾಯಿತು. ಮೂರನೇ ಕೋಣೆಯ ಮೂಲಕ ಯಾವುದೇ ತಂತ್ರಜ್ಞಾನ ಸೌಲಭ್ಯ ಇಲ್ಲದ ಮಕ್ಕಳಿಗೆ ಅವರ ಮನೆಯ ಬಳಿಯೇ ನಾಲ್ಕು-ಐದು ಮಕ್ಕಳನ್ನು ಮಾತ್ರ ಸಾಮಾಜಿಕ ಅಂತರದೊಡನೆ ಕೂರಿಸಿಕೊಂಡು ಮುಖಾಮುಖಿ ಶೈಕ್ಷಣಿಕ ನಿರಂತರ ಅಭ್ಯಾಸದ ಕುರಿತು ಮಾರ್ಗದರ್ಶನ ಮಾಡಲಾಯಿತು.

ಸಮಗ್ರ ವೇಳಾಪಟ್ಟಿಯೊಂದಿಗೆ ಕಾರ್ಯಾಚರಣೆ :

ಕರ್ನಾಟಕ ಶಿಕ್ಷಣ ಇಲಾಖೆಯು ನೀಡಿದ ವೇಳಾಪಟ್ಟಿಯನ್ನು ಸ್ಥಳೀಯ ಪರಿಸರಕ್ಕೆ ತಕ್ಕಂತೆ ಒಂದಿಷ್ಟು ಬದಲಾವಣೆಯೊಂದಿಗೆ ತಾಲ್ಲೂಕಿನ ಎಲ್ಲ ಶಾಲೆಗಳಲ್ಲೂ ಅನುಸರಿಸಲಾಯಿತು. ಸಾರ್ವತ್ರಿಕ ರಜಾದಿನ ಹೊರತುಪಡಿಸಿ ಶಾಲಾ

ಶಿಕ್ಷಕ ಸಿಬ್ಬಂದಿಗಳು ನಿರಂತರ ಶಾಲಾ ಸಮಯಕ್ಕೆ ಹಾಜರಾಗಿ ತಮಗೆ ಹಂಚಿಕೆ ಮಾಡಲಾದ ತರಗತಿ ಹಾಗೂ ವಿಷಯಗಳ ಪಠ್ಯಕ್ರಮಗಳನ್ನು ಸಂಬಂಧಿತ ಕಾಲ್ಪನಿಕ ಕೋಣೆಗಳ ಮಕ್ಕಳಿಗೆ ಬೋಧನಾ ನೆರವು ನೀಡಿದರು. ಯಾವ ಶಿಕ್ಷಕರು ಏಕ ಕಾಲದಲ್ಲಿ ಎಲ್ಲ ಮಕ್ಕಳನ್ನು ಸಂಪರ್ಕಿಸುವಂತೆ ವೇಳಾಪಟ್ಟಿಯನ್ನು ರಚಿಸಲಾಗಿತ್ತು.

ಶೂನ್ಯ ಕಲಿಕೆಯನ್ನು ಹೋಗಲಾಡಿಸಿದ ಕಾರ್ಯಾಚರಣೆ :

ಸಾಂಕ್ರಾಮಿಕ ರೋಗದ ಸಂಕಷ್ಟದ ಸಂದರ್ಭದಲ್ಲಿ ಸೂಕ್ತ ಚಿಕಿತ್ಸೆಯೇ ಇಲ್ಲದ ರೋಗದ ಹಾವಳಿಯ ಜಾಲದಲ್ಲಿ ಕಲಿಕೆ ವರ್ಷಪೂರ್ತಿ ನಿಂತುಬಿಡುವ ಅಪಾಯ ಮತ್ತು ಶೂನ್ಯ ಶೈಕ್ಷಣಿಕ ಪ್ರಗತಿ ದಾಖಲಿಸಿಬಿಡಬಹುದಾದ ನಕಾರಾತ್ಮಕ ಬೆಳವಣಿಗೆಯನ್ನು ವಿದ್ಯಾಗಮ ಕಾರ್ಯಕ್ರಮ ಪ್ರಬಲವಾಗಿ ಹೋಗಲಾಡಿಸಿತು. ಶಿಕ್ಷಕರ ನಿರಂತರ ಸೂಕ್ತ ಸಲಹೆ ಸೂಚನೆಗಳಂತೆ ಮಕ್ಕಳೆಲ್ಲ ಕಲಿಕೆಲ್ಲಿ ತೊಡಗಿಕೊಂಡುದು ಶೈಕ್ಷಕ ಹಿಮ್ಮಾಹಿತಿಯಿಂದ ತಿಳಿದುಬಂದ ವಿದ್ಯಾಗಮ ಕಾರ್ಕ್ರಮ ಯಶಸ್ಸಿನ ಫಲಶ್ರುತಿಯಾಗಿದೆ.

ವಿದ್ಯಾಗಮ ಕಾರ್ಯಕ್ರಮ ಫೋಟೊಗಳು

ನಿರಂತರ ಕಲಿಕೆ ಜೊತೆಗೆ ಮೌಲ್ಯಮಾಪನ ಮತ್ತು ದಾಖಲೀಕರಣ :

ವಾರದ ಒಂದು ದಿನದಲ್ಲಿ ಮಕ್ಕಳ ಕಲಿಕೆಯ ಹಿಮ್ಮಾಹಿತಿಯಂತೆ ಶಿಕ್ಷಕರು ತಮ್ಮ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ತಃಖ್ತೆಯಲ್ಲಿ ನಮೂದುಗಳನ್ನು ಮಾಡಿಕೊಳ್ಳುತ್ತಿದ್ದರು. ಕಲಿಕೆಯಲ್ಲಿ ನಿರಂತರ ಭಾಗವಹಿಸದ ಮಕ್ಕಳಿಗೂ ಮತ್ತು ಜಾಗೃತೆ ವಹಿಸದ ಪೋಷಕರುಗಳಿಗೆ ಇದರಿಂದ ಸಲಹೆ ಸೂಚನೆಗಳನ್ನು ನೀಡಲು ಮತ್ತು ಶಿಕ್ಷಕರುಗಳು ಸ್ವತಃ ಸ್ವ ಅವಲೋಕನ ಮಾಡಿಕೊಂಡು ಮುಂದಿನ ವಾರ ಪುನಃ ಮತ್ತಷ್ಟು ಸಿದ್ಧತೆಗಳೊಂದಿಗೆ ಮಕ್ಕಳ ಕಲಿಕೆಯ ಬೆಂಬಲಿಕೆಗೆ ಸಜ್ಜಾಗಲು ವಿದ್ಯಾಗಮ ಕಾರ್ಯಕ್ರಮ ನಮ್ಯವಾದ ಕಾರ್ಯಸೂಚಿ ಒಳಗೊಂಡು ಗುಣಾತ್ಮಕ ಶಿಕ್ಷಣ ಮತ್ತು ಮೌಲ್ಯಮಾಪನಕ್ಕೆ ಸಹಕಾರ ನೀಡಿತು.

ಮಕ್ಕಳಿಗೆ ಮಾನಸಿಕ ಬೆಂಬಲ ಹಾಗೂ ಸಾಮಾಜೀಕರಣದ ಬಲ :

ಆಡುತ್ತ, ಕಲಿಯುತ್ತ ತುಂಟಾಟಗಳೊಡನೆ ಬೆಳೆಯುತ್ತಿದ್ದ ಭವಿಷ್ಯದ ಭರವಸೆಗಳಾದ ಕಂದಮ್ಮಗಳು ಮನೆಗಳಲ್ಲಿ ಬಂದಾಗಿರಬೇಕಾದ ದುಃಸ್ಥಿತಿ ಬಂದದ್ದು ನಮ್ಮ ಕಾಲದ ಸಾಮಾಜಿಕ ದುರಂತವೇ ಸರಿ. ಶಾಲೆಗಳೆಂದರೆ ಬರೀ ಶೈಕ್ಷಣಿಕ ತರಬೇತಿ ಕೇಂದ್ರಗಳಲ್ಲ ಸಾಮಾಜೀಕರಣದ ಪ್ರಕ್ರಿಯೆಯ ಮೂಲ ಆಧಾರಗಳು. ಈ ಸಂದರ್ಭದಲ್ಲಿ ಬಹುತೇಕ ಮಕ್ಕಳು ಮಾನಸಿಕವಾಗಿ ದುರ್ಬಲರಾಗಲು ಕಾರಣವಾಗುವ ಪ್ರಸಂಗವಾಗಿತ್ತು. ವಿದ್ಯಾಗಮ ಯೋಜನೆಯಿಂದ ಮಕ್ಕಳಿಗೆ ಪುಸ್ತಕಗಳು ದೊರೆತು ಶಿಕ್ಷಕರುಗಳಿಂದ ನಿರಂತರ ಶೈಕ್ಷಣಿಕ ಚಟುವಟಿಕೆಗಳ ಮಾರ್ಗದರ್ಶನ ದೊರೆತುದು ಎಲ್ಲ ಮಕ್ಕಳಿಗೆ ಮಾನಸಿಕವಾಗಿ, ಬೌದ್ಧಿಕವಾಗಿ ಸುಸ್ಥಿರತೆ ಕಾಯ್ದುಕೊಳ್ಳಲು ನೆರವಾಯಿತು.

ಬಾಲಕಾರ್ಮಿಕತೆ ತಡೆದ ಕಾರ್ಯಕ್ರಮ :

ಶಾಲೆಗಳಿಲ್ಲ ಎಂದರೆ ಹಳ್ಳಿಗಾಡಿನ ಬಹುತೇಕ ಮಕ್ಕಳು ಕೃಷಿ ಸಂಬಂಧಿ ಮತ್ತಿತರ ಪಟ್ಟಣದ ವ್ಯವಹಾರಿಕ ಚಟುವಟಿಕೆಗಳ ಕಾರ್ಮಿಕರಾಗುವ ದುರಂತ ಸಂಭವಿಸಿಬಿಡುತ್ತದೆ. ವಿದ್ಯಾಗಮ ಯೋಜನೆಯು ಶಾಲಾ ಕಲಿಕೆಯಿಲ್ಲ ಎಂಬಂತಹ ಸ್ಥಿತಿಯನ್ನು ದೂರಾಗಿಸಿತು. ಶಿಕ್ಷಕರುಗಳ ಮಾರ್ಗದರ್ಶನದಿಂದ ಪಾಠಗಳ ಅವಲೋಕನ ನಡೆಯುತ್ತಿತ್ತು. ಅಭ್ಯಾಸಗಳ ಮನನ ಹಾಗೂ ದಾಖಲೀಕರಣ ಪ್ರಕ್ರಿಯೆ ನಡೆದು ಬಾಲಕಾರ್ಮಿಕತೆಗೆ ಒಳಗಾಗುವ ಬಹುಪಾಲು ಮಕ್ಕಳ ಬಾಲ್ಯವನ್ನು ರಕ್ಷಿಸಿತು.

ಸಂವೇದ ಈ ಕ್ಲಾಸ್ ತರಗತಿಗಳು :

ವಿದ್ಯಾಗಮದ ಭಾಗವಾಗಿ ಚಂದನ ವಾಹಿನಿ ಹಾಗೂ ಯುಟ್ಯೂಬ್ ಚಾನಲ್‌ಗಳ ಮೂಲಕ ಪರಿಣಿತ ಶಿಕ್ಷಕ ವರ್ಗದಿಂದ ಶಿಕ್ಷಣ ಇಲಾಖೆಯವರು ಕ್ರಮವಾಗಿ ಪಾಠಗಳ ಪ್ರಸ್ತುತಿ ಪ್ರಸಾರ ಮಾಡಿದರು. ಇದು ಈಗಲೂ ನಿರಂತರವಾಗಿ ಜಾರಿಯಲ್ಲಿದ್ದು ಮಕ್ಕಳ ಗುಣಾತ್ಮಕ ಶೈಕ್ಷಣಿಕ ಚಟುವಟಿಕೆಗಳು ನಾಡೆದವು. ಯಾವುದೇ ಕರೋನಾ ಸಂಬಂಧಿ ಅವಘಡಗಳು ಆಗದಂತೆ ಮುನ್ನೆಚ್ಚರಿಕೆ ಕೈಗೊಂಡ ಪರಿಣಾಮ ಮಕ್ಕಳು ಮತ್ತು ಪೋಷಕರು ಯೋಜನೆಯನ್ನು ಪ್ರೋತ್ಸಾಹಿಸಿ ಬೆಂಬಲಿಸಿದರು.

ಇಂದ

ಉಮೇಶ್ ಟಿ.ಪಿ.

ಸ.ಕಿ.ಪ್ರಾ. ಶಾಲೆ, ಅಮೃತಾಪುರ

ಸರಕಾರಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚಿಸಿದ ಆಂಗ್ಲ ಮಾಧ್ಯಮ ತರಗತಿ

ಜಿ.ಎಸ್. ನಾಗರಾಜ ಉಪನ್ಯಾಸಕರು, ಡಯಟ್, ಚಿತ್ರದುರ್ಗ.

ನಾವೆಲ್ಲರೂ ಸಮಾನ ಪ್ರತಿಭೆಯನ್ನು ಹೊಂದಿಲ್ಲ. ಆದರೆ ನಮ್ಮ ಎಲ್ಲಾ ಪ್ರತಿಭೆಗಳನ್ನು ಅಭಿವೃದ್ಧಿಪಡಿಸಲು ಸಮಾನ ಅವಕಾಶವಿದೆ ಎಂಬ ಮಾತನ್ನು ನಮ್ಮ ನೆಚ್ಚಿನ ಶಿಕ್ಷಣ ತಜ್ಞರೂ, ರಾಷ್ಟ್ರಪತಿಗಳಾದ ಡಾ|| ಅಬ್ದುಲ್ ಕಲಾಂ ಅವರು ಹೇಳಿದ್ದಾರೆ. ಇಂತಹ ಪ್ರತಿಭೆಗಳ ಅಭಿವೃದ್ಧಿಗೆ ಸಮಾನ ಅವಕಾಶದ ಬಾಗಿಲು ತೆರೆಯುವುದೇ ನಮ್ಮ ಶಾಲೆಗಳಲ್ಲಿ ಮಗು ತನಗಿಷ್ಟವಾದ ಭಾಷೆಯಲ್ಲಿ ತನಗಿಷ್ಟವಾದ ವಿಷಯಗಳನ್ನು ಕಲಿಯಲು ಅವಕಾಶ ಪಡೆದಿರುತ್ತಾನೆ. ಇತ್ತೀಚಿನ ದಿನಗಳಲ್ಲಿ ಪೋಷಕರ ಒಲವು ಆಂಗ್ಲ ಮಾಧ್ಯಮ ಶಾಲೆಗಳ ಕಡೆಗೆ ಹೆಚ್ಚಾಗಿದ್ದು ವಿಜ್ಞಾನ ಮತ್ತು ತಂತ್ರಜ್ಞಾನ ಆಧಾರಿತ ಮಾಹಿತಿಗಳು ಇಂಗ್ಲೀಷಿನಲ್ಲಿ ಹೆಚ್ಚು ದೊರೆಯುತ್ತಿರುವ ಕಾರಣ ಪೋಷಕರು ಮತ್ತು ಮಕ್ಕಳು ಆಂಗ್ಲ ಮಾಧ್ಯಮದ ಶಾಲೆಗಳತ್ತ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ.

ಪೋಷಕರ ಇಚ್ಛೆಯನ್ನು ಅರಿತ ಸರ್ಕಾರ 2019-20ರ ಸಾಲಿಗೆ ಇಡೀ ಕರ್ನಾಟಕದಾದ್ಯಂತ 1000 ಆಂಗ್ಲ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಿತು. ಸರ್ಕಾರದ ಈ ನಿಲುವು ದಾಖಲಾತಿ ಕುಸಿತದಿಂದ ಕಂಗಾಲಾಗಿದ್ದ ಸರ್ಕಾರಿ ಶಾಲೆಗಳಿಗೆ ಮರುಜೀವ ತುಂಬಿದಂತಾಯಿತು. ಅದರಂತೆ ಪೋಷಕರು ಕೂಡ ಸರ್ಕಾರದ ಈ ನಿರ್ಧಾರವನ್ನು ತುಂಬು ಹೃದಯದಿಂದ ಸ್ವಾಗತಿಸಿದರು. ಆಂಗ್ಲ ಮಾಧ್ಯಮದಲ್ಲಿ ನಗರಗಳಲ್ಲಿ ಎಲ್.ಕೆ.ಜಿ. - ಯು.ಕೆ.ಜಿ. ಓದುತ್ತಿದ್ದ ತಮ್ಮ ಮಕ್ಕಳನ್ನು ಖಾಸಗಿ ಶಾಲೆಯಿಂದ ಬಿಡಿಸಿ ಸರ್ಕಾರಿ ಶಾಲೆಗೆ 1ನೇ ತರಗತಿಗೆ ದಾಖಲು ಮಾಡಿದರು. ಸರ್ಕಾರ ಈ ಶಾಲೆಗಳಲ್ಲಿ ಮಕ್ಕಳಿಗೆ ಒಂದು ತರಗತಿಗೆ ಕೇವಲ 30 ಮಂದಿ ವಿದ್ಯಾರ್ಥಿಗಳಿಗೆ ಅವಕಾಶ ನೀಡಿದ್ದು ಸೀಟು ಸಿಗದ ಪೋಷಕರು ಕಸಿವಿಸಿಗೊಂಡರು. ಶಾಲೆಗಳಲ್ಲಿ ತರಗತಿಗಳನ್ನು ಪ್ರಾರಂಭಿಸುವ ಮುನ್ನ ಸರ್ಕಾರ ಆಯ್ಕೆ ಮಾಡಿ ಅವರಿಗೆ 15 ದಿನಗಳ EMTIP (ENGLISH MEDIUM TEACHERS INDUCTION PROGRMME) ಸನಿವಾಸ ತರಬೇತಿಯನ್ನು ನೀಡಿತು.

ಇಲ್ಲಿ ಶಿಕ್ಷಕರಿಗೆ ಸರಳವಾಗಿ ಹಾಗೂ ಸುಲಭವಾಗಿ ಪ್ರಾರಂಭಿಕ ಹಂತದ ಮಕ್ಕಳಿಗೆ ಇಂಗ್ಲೀಷ್ ಬೋಧನೆಯನ್ನು ಯಾವ ಚಟುವಟಿಕೆಗಳ ಮೂಲಕ ಪರಿಣಾಮಕಾರಿಯಾಗಿ ಬೋಧಿಸಬಹುದು ಎಂಬುದನ್ನು ತಿಳಿಸಿಕೊಡಲಾಯಿತು.

ಭಾಗವಹಿಸಿದ ಶಿಕ್ಷಕರು ಕೂಡ ತಮ್ಮ ಪರಿಸರದ ಮಕ್ಕಳಿಗೆ ಅವರಿಗೆ ಒಗ್ಗುವ ರೀತಿಯಲ್ಲಿ ತಮ್ಮದೇ ಆದ ಹೊಸ ಚಟುವಟಿಕೆಗಳನ್ನು ತಾವೇ ಅನ್ವೇಷಿಸಿ ಅದನ್ನು ತರಬೇತಿಗಳಲ್ಲಿ ಪ್ರದರ್ಶಿಸಿ ಅಧಿಕಾರಿಗಳಿಂದ ಪ್ರಶಂಸೆ ಪಡೆದರು.

ಒಟ್ಟಿನಲ್ಲಿ EMTIP (ENGLISH MEDIUM TEACHERS INDUCTION PROGRMME) ಶಾಲೆಗಳು ಕರ್ನಾಟಕದಾದ್ಯಂತ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಾ ಮಕ್ಕಳ ಇಂಗ್ಲೀಷ್ ಒಲವನ್ನು ತಣಿಸುತ್ತ ಪೋಷಕರ ಮೆಚ್ಚುಗೆಯನ್ನು ಪಡೆಯಿತು. ಸರ್ಕಾರಿ ಶಾಲೆಗಳಲ್ಲಿ ಹೊಸ ಶಕೆಯನ್ನು ಆರಂಭಿಸಿವೆ ಎಂಬುದು ಅತಿಶಯೋಕ್ತಿಯೇನಲ್ಲ. ಈ ನಿಟ್ಟಿನಲ್ಲಿ ಕೆಲಸ ಮಾಡಿದ ಸರ್ಕಾರದ ಎಲ್ಲಾ ಉನ್ನತ ಅಧಿಕಾರಿಗಳಿಗೆ, ಡಯಟ್ ಪ್ರಾಂಶುಪಾಲರು, ಉಪನ್ಯಾಸಕರಿಗೂ, ತರಬೇತಿ ನೀಡಿದ ಎಲ್ಲ ಸಂಪನ್ಮೂಲ ವ್ಯಕ್ತಿಗಳಿಗೂ, ಶಿಕ್ಷಕರಿಗೂ ಅಭಿನಂದನೆಗಳು.

ಜಿಲ್ಲೆಯಲ್ಲಿ ಆಂಗ್ಲ ಮಾಧ್ಯಮ ತರಗತಿಯ ಯಶಸ್ಸನ್ನು ಕುರಿತು ಶಿಕ್ಷಕರ ಅಭಿಪ್ರಾಯ

- **ಶ್ರೀ ಎಚ್.ಆರ್. ಮಂಜುನಾಥ್** ಮುಖ್ಯ ಶಿಕ್ಷಕರು ಸರ್ಕಾರಿ ಪ್ರಾಥಮಿಕ ಶಾಲೆ ಗೋಸಿಕೆರೆ ಚಳ್ಳಕೆರೆ ತಾಲ್ಲೂಕು : ದಾಖಲಾತಿ ಗಣನೀಯವಾಗಿ ಹೆಚ್ಚಳವಾಗಿದೆ. ಹಾಜರಾತಿ ಸುಧಾರಿಸುತ್ತಿದೆ ಮಾಧ್ಯಮ ತರಗತಿಯನ್ನು ಬೋಧಿಸುವ ಶಿಕ್ಷಕರಿಗೆ ಕಲಿಕೆಗೆ ತುಂಬಾ ಸಹಕಾರ ಹಾಗೂ ಪರಿಣಾಮಕಾರಿಯಾಗಿದೆ. 30ಕ್ಕಿಂತ ಹೆಚ್ಚಿನ ದಾಖಲಾತಿಗೆ ಪೋಷಕರಿಂದ ಒತ್ತಾಯ.

ಶ್ರೀ ಆರ್. ರವಿಕುಮಾರ್ ಶಿಕ್ಷಕರು ಕೆ.ಪಿ.ಎಸ್. ಶ್ರೀರಾಂಪುರ : ಸರ್ಕಾರಿ ಶಾಲೆಗಳ ಉಳಿವಿಗಾಗಿ ಸರ್ಕಾರ ಕೈಗೊಂಡ ನಿರ್ಧಾರಕ್ಕೆ ನಾವೆಲ್ಲ ಆಭಾರಿಯಾಗಿರುತ್ತೇವೆ. ಆಂಗ್ಲ ಮಾಧ್ಯಮ ತರಗತಿಯನ್ನು ಪ್ರಾರಂಭಿಸಲು ರೂಪುರೇಷೆ ರಚಿಸಿ ಯಶಸ್ವಿಗೊಳಿಸಿದ ಎಲ್ಲಾ ಅಧಿಕಾರಿ ವರ್ಗದವರಿಗೂ ಧನ್ಯವಾದಗಳು.

ಉಷಾ ಸಜ್ಜನ್ ಸಹಶಿಕ್ಷಕಿ ಕೆ.ಪಿ.ಎಸ್ ಪರಶುರಾಮಪುರ : ಆಂಗ್ಲ ಮಾಧ್ಯಮ ತರಗತಿಗಳಲ್ಲಿ ಕಲಿಕೆ, ಬೋಧನೆ, ತರಗತಿ ಕೋಣೆಗಳ ಅಲಂಕಾರ, ಪೀಠೋಪಕರಣ, ಶಿಸ್ತು, ಪೋಷಕರ ಸಹಕಾರ ಯಾವುದರಲ್ಲೂ ಖಾಸಗಿ

ಶಾಲೆಗಳಿಗಿಂತ ಕಡಿಮೆ ಇಲ್ಲ. ದೂರದ ಖಾಸಗಿ ಶಾಲೆಗಳಿಂದ ಮಕ್ಕಳನ್ನು ಬಿಡಿಸಿ ಸ್ಥಳೀಯ ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುತ್ತಿರುವುದರಿಂದ ಪೋಷಕರಿಗೆ ತಮ್ಮ ಮಗುವಿನ ಶೈಕ್ಷಣಿಕ ಪ್ರಗತಿಯನ್ನು ಕಾಲಕಾಲಕ್ಕೆ ತಿಳಿಯಲು ಅನುಕೂಲವಾಗಿದೆ. ಆಂಗ್ಲ ಮಾಧ್ಯಮ ತರಗತಿ ಶಿಕ್ಷಕರು ಹಾಗೂ ಪೋಷಕರು ಸ್ವಯಂಪ್ರೇರಿತರಾಗಿ ದೇಣಿಗೆ ಸಂಗ್ರಹಿಸಿ ಮಕ್ಕಳಿಗೆ ಪೀಠೋಪಕರಣ ಹಾಗೂ ಪಾಠೋಪಕರಣಗಳ ವ್ಯವಸ್ಥೆ ಮಾಡಿದ್ದಾರೆ. Anyone who has never made a mistke as never tried anything the new ಎಂಬ ಐನ್‌ಸ್ಟೀನ್ ನುಡಿಯಂತೆ ಮಕ್ಕಳು ಮಾಡುವ ತಪ್ಪುಗಳ ಮೂಲಕ ಸರಿಯಾದದ್ದನ್ನು ಕಲಿಯುತ್ತಿದ್ದಾರೆ. ನಾವು ಕಲಿಸಿದ ಮಕ್ಕಳು ಇಂಗ್ಲೀಷಿನಲ್ಲಿ ಮಾತನಾಡುತ್ತಿರುವುದನ್ನು ನೋಡಿ ಶಿಕ್ಷಕರು ತುಂಬಾ ಸಂತೋಷಪಡುತ್ತಿದ್ದಾರೆ. **ನಾಗಮಣಿ** ಸಹಶಿಕ್ಷಕಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಸ್‌ಸ್ಟ್ಯಾಂಡ್ ಶಾಲೆ ಹಿರಿಯೂರು : ಆಂಗ್ಲ ಮಾಧ್ಯಮ ತರಗತಿಯ ಹೆಚ್ಚಿನ ವಿಭಾಗಗಳಿಗೆ ಪೋಷಕರಿಂದ ಬೇಡಿಕೆ ಹೆಚ್ಚಿದೆ. ಮಕ್ಕಳ ದಾಖಲಾತಿ ತೀವ್ರಗತಿಯಲ್ಲಿ ಆಗುತ್ತಿದ್ದು ಅವರು ಸಹ ಕಲಿಕೆಯಲ್ಲಿ ಹೆಚ್ಚಿನ ಆಸಕ್ತಿವಹಿಸಿದ್ದಾರೆ ಇದರಿಂದ ನನಗೆ ತೃಪ್ತಿಯು ದೊರೆತಿದೆ.

-- ಜಿ.ಎಸ್. ನಾಗರಾಜ್ ಉಪನ್ಯಾಸಕರು, ಡಯಟ್, ಚಿತ್ರದುರ್ಗ.

10ನೇ ತರಗತಿ ಗಣಿತ

ಏಕರೂಪ ಶಿಕ್ಷಣ

ಎಮ್. ಪ್ರಕಾಶ್ ಉಪನ್ಯಾಸಕರು, ಡಯಟ್, ಚಿತ್ರದುರ್ಗ.

ರಾಷ್ಟ್ರಾದ್ಯಂತ ಏಕರೂಪ ಶಿಕ್ಷಣವನ್ನು ಅಳವಡಿಸುವ ದೃಷ್ಟಿಯಿಂದ ಪದವಿಪೂರ್ವ ಶಿಕ್ಷಣದಲ್ಲಿ ಎನ್.ಸಿ.ಇ.ಆರ್.ಟಿ. ಪಠ್ಯಪುಸ್ತಕಗಳನ್ನು ಅಳವಡಿಸಿರುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ಆಧರಿಸಿದ 9ನೇ ತರಗತಿಯ ಗಣಿತ ಮತ್ತು ವಿಜ್ಞಾನ ವಿಷಯಗಳನ್ನು 2017-18ನೇ ಸಾಲಿನಿಂದ ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ಈ ನೂತನ ಪಠ್ಯಪುಸ್ತಕವನ್ನು ಬೋಧಿಸಲು ಅನುವಾಗುವಂತೆ ಶಿಕ್ಷಕರಿಗೆ ತರಬೇತಿ ನೀಡಿದೆ. 2018-19ನೇ ಸಾಲಿನಿಂದ 10ನೇ ತರಗತಿಯ ಗಣಿತ ಮತ್ತು ವಿಜ್ಞಾನ ವಿಷಯಗಳ ಎನ್.ಸಿ.ಇ.ಆರ್.ಟಿ. ಪಠ್ಯಪುಸ್ತಕಗಳನ್ನು ಜಾರಿಗೆ ತರಲಾಗುತ್ತಿದೆ.

ರಾಷ್ಟ್ರ ಮಟ್ಟದಲ್ಲಾಗುವ ಶೈಕ್ಷಣಿಕ ಬೆಳವಣಿಗೆಗಳು ಹಾಗೂ ಬದಲಾವಣೆಗಳನ್ನು ಗಮನದಲ್ಲಿ ಇರಿಸಿಕೊಂಡು ನಮ್ಮ ರಾಜ್ಯದ ವಿದ್ಯಾರ್ಥಿಗಳು ರಾಷ್ಟ್ರ ಮಟ್ಟದಲ್ಲಿ ಶೈಕ್ಷಣಿಕವಾಗಿ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ವಿಯಾಗಿ ಸಾಧನೆಯನ್ನು ಮಾಡಲು ಅನುಕೂಲವಾಗುವಂತೆ ಸೂಕ್ತ ಮಾರ್ಗದರ್ಶನ ನೀಡಲು ಪ್ರೇರೇಪಿಸಿ ತರಬೇತಿ ನೀಡುವ ದೃಷ್ಟಿಯಿಂದ ತರಬೇತಿ ಸಾಹಿತ್ಯವನ್ನು ಸಿದ್ಧಗೊಳಿಸಿದೆ.

ಈ ತರಬೇತಿ ಸಾಹಿತ್ಯದಲ್ಲಿ ಎನ್.ಸಿ.ಇ.ಆರ್.ಟಿ. ಪಠ್ಯಪುಸ್ತಕಗಳ ವೈಶಿಷ್ಟ್ಯತೆ, ರಾಜ್ಯದ ಪಠ್ಯಪುಸ್ತಕಗಳೊಂದಿಗೆ ಹೋಲಿಸಿದಾಗ ಕಂಡುಬರುವ ಸಾಮಾನ್ಯ ಅಂಶಗಳು, ನೂತನ ಪರಿಕಲ್ಪನೆಗಳು, ಪುನರಾವರ್ತನೆಯಾಗುವ ಪರಿಕಲ್ಪನೆಗಳು ಹಾಗೂ ಪಾಠಗಳನ್ನು ತರಗತಿಯಲ್ಲಿ ಬೋಧಿಸುವ ವಿಧಾನವನ್ನು ಅಧ್ಯಾಯವಾರು ಚಟುವಟಿಕೆಗಳ ಸಹಿತ ವಿವರಿಸಲಾಗಿದೆ. ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವ ಚಟುವಟಿಕೆಗಳನ್ನು ನೀಡಲಾಗಿದೆ. ಶಿಕ್ಷಕರು ಪ್ರಾಯೋಗಿಕ ಕೌಶಲಗಳಿಗೆ ಒತ್ತು ನೀಡಬೇಕು. ಅಂತರ್ಗತ ವಿಧಾನ ಮತ್ತು ರಚನಾತ್ಮಕ ವಿಧಾನಗಳನ್ನು ತರಗತಿ ಬೋಧನೆಯಲ್ಲಿ ಅಳವಡಿಸಲು ಅನುವಾಗುವಂತೆ ತರಬೇತಿ ಸಾಹಿತ್ಯ ಸಿದ್ಧಪಡಿಸಿದೆ.

ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸಿ ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗುವ ನಿಟ್ಟಿನಲ್ಲಿ ಶಿಕ್ಷಕರು ಶ್ರಮಿಸಬೇಕು. ಶಿಕ್ಷಕರು ಈ ತರಬೇತಿ ಸಾಹಿತ್ಯವನ್ನು ಸಮರ್ಪಕವಾಗಿ ಬಳಸಿಕೊಂಡು ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು.

ಆತ್ಮ ಪ್ರಜ್ಞೆ

ಕೆ.ಎಮ್. ನಾಗರಾಜ ಉಪನ್ಯಾಸಕರು, ಡಯಟ್, ಚಿತ್ರದುರ್ಗ.

ನಿಸರ್ಗ ಕೊಟ್ಟ ಅತ್ಯಮೂಲ್ಯ ಕೊಡುಗೆ ಮತ್ತು ಶ್ರೇಷ್ಟ ಕಾಣಿಕೆ **"ಜೀವ"** ಪ್ರತಿಯೊಬ್ಬ ವಿದ್ಯಾರ್ಥಿಗಳ ಅಂತರಾಳದಲ್ಲಿ ಹುದುಗಿರುವ ಸಾಮರ್ಥ್ಯವನ್ನು ಉನ್ನತೀಕರಿಸಿ ಮತ್ತು ಪುಷ್ಠಿದಾಯಕವಾಗಿ ಸರ್ವತೋಮುಖ ಅಭಿವೃದ್ಧಿಗಾಗಿ ಹಾಗೂ ಸಮಾಜದ ಒಳಿತಿಗಾಗಿ ಬಳಸುವ ನಿಟ್ಟಿನಲ್ಲಿ ಸ್ವ ಅರಿವು ಬಹುಮುಖ್ಯವಾದುದು. ಕಲಿಕೆ ನಿಂತ ನೀರಾಗದೇ ಸದಾ ಹರಿಯುತ್ತಿರುವ ನೀರಿನಂತೆ ವಿದ್ಯಾರ್ಥಿಗಳು ತನ್ನನ್ನು ಅರ್ಥಮಾಡಿಕೊಳ್ಳುವ ಕೌಶಲ ಬೆಳೆಸಿಕೊಂಡು ಮತ್ತು ತನ್ನ ವರ್ತನೆ ನಡವಳಿಕೆಯಲ್ಲಿ ಹಲವಾರು ಬದಲಾವಣೆಗಳನ್ನು ತಂದುಕೊಳ್ಳಬೇಕಾಗುತ್ತದೆ. ಮೊದಲು ತನ್ನನ್ನು ತಾನು ಅರ್ಥಮಾಡಿಕೊಳ್ಳಬೇಕು ಅಂದಾಗ ಮಾತ್ರ ಬದಲಾವಣೆ ಹಾದಿ ಸುಗಮವಾಗಿ ಸಾಗುತ್ತದೆ. ವಿದ್ಯಾರ್ಥಿಗಳಲ್ಲಿ ತನ್ನ ಬಗ್ಗೆ ಗೌರವ ಸ್ವಾಭಿಮಾನ ಬೆಳೆಯಬೇಕಾದರೆ ಆತ್ಮ ಪ್ರಜ್ಞೆಯ ಅರಿವು ಬಹಳ ಪ್ರಮುಖ ಪಾತ್ರ ವಹಿಸುವ ಮೂಲಕ ಇದು ತನ್ನನ್ನು ತಾನು ಅರಿಯಲು ಆತ್ಮ ವಿಶ್ವಾಸ ವೃದ್ಧಿಸಲು ಸಹಕಾರಿ ಅಂಶ ಎಂಬುದು ಅಕ್ಷರಃ ಸತ್ಯ.

ಪ್ರಸ್ತುತ ಕಾಲಘಟ್ಟದಲ್ಲಿ ಎಷ್ಟೋ ವಿದ್ಯಾರ್ಥಿಗಳಿಗೆ ಕಾಲಕ್ಕೆ ತಕ್ಕಂತೆ ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡುವ ಮೂಲಕ ಜಗತ್ತಿಗೆ ಅವಿಸ್ಮರಣೀಯ ಕಾಣಿಕೆ ನೀಡಲು ಸಾಧ್ಯ.

ವರಕವಿ ಬೇಂದ್ರೆಯವರು ನುಡಿದಂತೆ "ಪ್ರತಿಯೊಬ್ಬ ವಿದ್ಯಾರ್ಥಿಗಳಲ್ಲಿ ಅಗಾಧಶಕ್ತಿ ಅಡಗಿರುತ್ತದೆ. ಅದನ್ನು ಸಾಕಾರಾತ್ಮಕವಾಗಿ ಬಳಸಿಕೊಂಡಾಗ ಮಾತ್ರ ಅದ್ಭುತ ಸಾಧನೆ ಸಾಧ್ಯವಾಗುತ್ತದೆ." ಇಂದಿನ ವಿದ್ಯಾರ್ಥಿಗಳೇ ಭವಿಷ್ಯದ ರೂವಾರಿಗಳು ಎಂಬ ಮಾತು ಅಕ್ಷರಶಃ ಸತ್ಯವಾಗಿದ್ದು ಮಕ್ಕಳಲ್ಲಿ ಕೌಶಲ್ಯಭರಿತ ಶಿಕ್ಷಣ ನೀಡುವ ಮೂಲಕ ಭಾವಿ ಜೀವನಕ್ಕೆ ವಿದ್ಯಾರ್ಥಿಗಳನ್ನು ಸಿದ್ದಗೊಳಿಸುವಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ಸಾಮರ್ಥ್ಯಗಳಾವುವು? ಯಾವ ವಿಷಯದಲ್ಲಿ ವಿದ್ಯಾರ್ಥಿಗಳು ಬೇರೆಯವರಿಗಿಂತಲೂ ಭಿನ್ನವಾಗಿದ್ದಾರೆ ಎಂಬುದನ್ನು ಅರಿತುಕೊಂಡು ಅವರಲ್ಲಿರುವ ಸಕಾರಾತ್ಮಕ ಹಾಗೂ ನಕಾರಾತ್ಮಕ ಗುಣಗಳಾವುವು? ಎಂಬುದನ್ನು ತಿಳಿದುಕೊಂಡು ವಿದ್ಯಾರ್ಥಿಗಳ ಸಾಮರ್ಥ್ಯಗಳನ್ನು ಮನದ ಕನ್ನಡಿಯಲ್ಲಿ ತಾವೇ ನೋಡಿಕೊಂಡ ಹಾಗೆ ಪ್ರತಿಬಿಂಬಿಸಲು ಸಮಸ್ತ ಶಿಕ್ಷಕವೃಂದದವರು ಮುಂಚೂಣಿಯಲ್ಲಿರುವ ಕುರಿತು ಇದರ ಪ್ರಧಾನ ಆಶಯ.

ಕೆ.ಎಮ್. ನಾಗರಾಜ್

ಉಪನ್ಯಾಸಕರು, ಡಯಟ್, ಚಿತ್ರದುರ್ಗ.

The Importance of Grammar in English language teaching

The word grammar has many meanings. Some people opine that grammar tells us the 'correct way' of speaking and writing . Some people defend that it is, infact tells us how the human beings organise ideas into words . Apart from all these arguments,what I say is 'Grammar 'is the proper route or channel to convey the information\meaning in the right manner.It helps us to avoid the misunderstanding through the correct rules and usages.Some experts of English also opine that 'Grammar is, infact,a science of communication. It is widely accepted that 'Grammar' is a systematic study of scientific method which provides the learners information and guidance which are essential to learn a language. English grammar is very useful for the professionals such as writers, journalists, poets, proffessors, politicians, business-men etc.to be successful in their professions. It also clarifies that how a language should be spoken and written in the right manner effectively.

The place of grammar in the school curriculum has been subjected to a lot of controvercy in recent years . The traditional view over emphasised grammar. According to it a language could be learnt by learning it rules. Against this view a revolt took place. It was argued that a language is learnt not by learning its rules , but by actually using it. These are two extreme views-one giving much importance to grammar and other condemining it as altogether useless. As a result of further discussion we have today arrived at a conclusion which says that it is necessary to teach from a certain stage in school and in a certain manner.

Grammar can be classified under two heads :

1. Functional grammar\Informal grammar.

2. Formal grammar\Theoretical grammar\prescriptive grammarl

There are two methods of teaching grammar :

1.Deductive method.

2.Inductive method.

Before I conclude it,once again say , grammar is important in language learning because it provides information that helps the readers comprehension. It is the structure that conveys precise meaning from the writer to the audience.Eliminate grammatical errors from your writing and reward your readers with clear communication.

M. RANGANATHA
LECTURER, DIET
CHITRADURGA

ಕೈ ಬರಹ ನಿಘಂಟು ರಚಿಸಿದ ಕ್ರಿಯಾಶೀಲ ಶಿಕ್ಷಕಿ ಅನಿತಾ

(ಶಿಕ್ಷಕಿ ಸಾಧನೆಗೆ ಅರಸಿ ಬಂದ ಇನ್ನೋವೇಟಿವ್ ಅವಾರ್ಡ್)

ಅರ್ಚಕಸ್ಯ ಪ್ರಭಾವೇನ ಶಿಲಾಭವತಿ ಶಂಕರ:
ಆಚಾರ್ಯಸ್ಯ ಪ್ರಭಾವೇನ ಶಿಷ್ಯಭವತಿ ಸುಶಿಕ್ಷಿತ:

ಎಂಬ ನುಡಿಯಂತೆ ವಿದ್ಯಾರ್ಥಿಯ ಸರ್ವಾಂಗೀಣ ವಿಕಾಸದಲ್ಲಿ ಶಿಕ್ಷಕರು ಪ್ರಮುಖ ಪಾತ್ರ ವಹಿಸುತ್ತಾರೆ. ತರಗತಿ ಕೋಣೆಯಲ್ಲಿ ದೇಶದ ಭವಿಷ್ಯ ನಿರ್ಮಾಣವಾಗುತ್ತದೆ. ಈ ಹಿನ್ನೆಲೆಯಲ್ಲಿ ಮಕ್ಕಳಿಗೆ ಉತ್ತಮ ಭವಿಷ್ಯ ರೂಪಿಸುವಲ್ಲಿ ಬೋಧನೆಯ ಪ್ರಕ್ರಿಯೆಯಲ್ಲಿ ಶಿಕ್ಷಕರು ಕೇವಲ ಪಠ್ಯ ವಿಷಯದ ಮಾಹಿತಿಯನ್ನು ತುಂಬದೇ ಕಲಿಕೆಗೆ ಪೂರಕವಾಗುವ ಹೊಸ ಚಿಂತನೆ,ಆಲೋಚನೆ ಬೆಳೆಸಿಕೊಳ್ಳುವುದು ಅತಿ ಅಗತ್ಯ.ಇಂತಹ ಹೊಸ ಆಲೋಚನೆಯೊಂದಿಗೆ ಕೈ ಬರಹ ನಿಘಂಟು ರಚಿಸುವ ಮೂಲಕ ವಿನೂತನ ಪ್ರಯತ್ನ ಪ್ರಯೋಗ ಮಾಡಿರುವವರು ಕ್ರಿಯಾಶೀಲ ಶಿಕ್ಷಕಿ ಅನಿತಾ.

ವಿದ್ಯಾರ್ಥಿ ಸ್ನೇಹಿ ನಿಘಂಟು ರಚನೆ : ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನ ತುಪ್ಪದಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಟಿ.ಬಿ. ಅನಿತಾ ಪ್ರಾಥಮಿಕ ಶಾಲೆಯ 5ರಿಂದ 7ನೇ ತರಗತಿಯ ಕನ್ನಡ ಮತ್ತು ಇಂಗ್ಲೀಷ್ ವಿಷಯಕ್ಕೆ ನಿಘಂಟು ರಚಿಸುವ ಮೂಲಕ ವಿನೂತನ ಪ್ರಯೋಗ ಮಾಡಿದ್ದಾರೆ. ಪುಸ್ತಕದ ಅಂಗಡಿಗಳಲ್ಲಿ ನಿಘಂಟುಗಳು ಲಭ್ಯವಿದ್ದರೂ ಅದರಲ್ಲಿ ಸಾವಿರಾರು ಪದಗಳು ಇರುತ್ತವೆ. ಪ್ರಾಥಮಿಕ ಹಂತದ ಮಕ್ಕಳಿಗೆ ಇದರಲ್ಲಿ ಅರ್ಥ ಹುಡುಕುವುದು ಕಷ್ಟವಾಗಬಹುದು. ಒಂದು ತರಗತಿಯಲ್ಲಿ ಮಕ್ಕಳ ಕಲಿಕೆಯಲ್ಲಿ ಭಿನ್ನತೆಯಿದ್ದು ವೇಗವಾಗಿ ಕಲಿಯುವವರು, ನಿಧಾನವಾಗಿ ಕಲಿಯುವವರು ಇರುತ್ತಾರೆ. ಎಲ್ಲಾ ಮಕ್ಕಳು ಸುಲಭವಾಗಿ ಅರ್ಥ ಹುಡುಕುವ ಮತ್ತು ಸಮಯದ ಉಳಿತಾಯದ ದೃಷ್ಟಿಯಿಂದ ಈ ನಿಘಂಟು ರಚಿಸಲಾಗಿದೆ.

5ರಿಂದ 7ರವರೆಗಿನ 3 ತರಗತಿಗಳಲ್ಲಿ ಎಲ್ಲಾ ಪಾಠಗಳಲ್ಲಿ ಬರುವ ಹೊಸ ಪದಗಳ ಅರ್ಥಗಳನ್ನು ನಿಘಂಟಿನಲ್ಲಿ ಬರೆಯಲಾಗಿದೆ. ತರಗತಿಗೆ ಅನುಗುಣವಾಗಿ ಸೀಮಿತ ಪದಗಳ ಅರ್ಥಗಳು ಬೇಕಾಗಿರುವುದರಿಂದ ಪ್ರತಿ ಪಾಠಕ್ಕೆ ನಾವೇ ನಿಘಂಟು ರಚಿಸಿಕೊಂಡರೆ ಬೋಧನೆ ಹಾಗೂ ಕಲಿಕೆಗೆ ನೆರವಾಗುತ್ತದೆ. ಮತ್ತು ಹಣವೂ ಉಳಿತಾಯವಾಗುತ್ತದೆ.

ನಿಘಂಟು ರಚನೆಗೆ ಮಕ್ಕಳೇ ಪ್ರೇರಣೆ ಎನ್ನುವ ಅನಿತಾ ನಾವು ಬೋಧನೆಯಲ್ಲಿ ಮಕ್ಕಳೊಂದಿಗೆ ಸಂಪೂರ್ಣವಾಗಿ ತೊಡಗಿಸಿಕೊಂಡಾಗ ಅವರ ಕಲಿಕಾ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಅದಕ್ಕೆ ಪೂರಕವಾದ ಚಟುವಟಿಕೆ ಆಯೋಜಿಸಲು ಹೊಸ ಚಿಂತನೆಗಳು ಬೆಳೆಯುತ್ತವೆ. ಈ ಹಿಂದೆ ಚಿತ್ರದುರ್ಗ ತಾಲೂಕಿನ ಹಿರೇಗುಂಟನೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ವಿಷಯಕ್ಕೆ ಕೈ ಬರಹ ನಿಘಂಟು ರಚಿಸಿದ್ದೆ ಇದು ವಿದ್ಯಾರ್ಥಿಗಳ ಕಲಿಕೆಯಲ್ಲಿ ಉತ್ತಮ ಫಲ ಕೊಟ್ಟಿದ್ದರಿಂದ ಈಗ ಇಂಗ್ಲೀಷ್ ಭಾಷೆಯಲ್ಲಿ ನಿಘಂಟು ರಚಿಸಿದ್ದೇನೆ.ಡ್ರಾಯಿಂಗ್ ಶೀಟ್‌ನಲ್ಲಿ 'ಎ' ಯಿಂದ 'ಝಡ್' ವರೆಗೆ ಪ್ರತಿ ಪಾಠದಲ್ಲಿ ಬರುವ ಹೊಸ ಪದಗಳನ್ನು ಆಯ್ದುಕೊಂಡು ಅದಕ್ಕೆ ಅರ್ಥಸಹಿತ ಬರೆಯಲಾಗಿದೆ. ತರಗತಿಯಲ್ಲಿ ಕಪ್ಪುಹಲಗೆ ಪಕ್ಕದಲ್ಲೇ ಚಾರ್ಟ್ ನೇತು ಹಾಕಲಾಗಿದೆ. ಪ್ರತಿ ತರಗತಿಯಲ್ಲಿ ಗೋಡೆಗೆ ತೂಗು ಹಾಕಿರುವುದರಿಂದ ಮಕ್ಕಳ ಕಲಿಕೆ ಸುಲಭವಾಗುತ್ತದೆ. ಪ್ರಾಥಮಿಕ ಹಂತದಲ್ಲಿ ಉತ್ತಮ ಅಡಿಪಾಯ ಹಾಕಬೇಕಾಗಿರುವುದರಿಂದ ಶಿಕ್ಷಕರು ಮಕ್ಕಳಿಗೆ ಸ್ಫೂರ್ತಿಯ ಸೆಲೆಯಾಗಿ ಕಾರ್ಯನಿರ್ವಹಿಸಬೇಕು ಎನ್ನುತ್ತಾರೆ ಶಿಕ್ಷಕಿ ಅನಿತಾ.

ಇನ್ನೋವೇಟಿವ್ ಟೀಚರ್ ಅವಾರ್ಡ್: ಸಾಧನೆ ಮಾತನಾಡಬೇಕು, ಮಾತನಾಡುವುದೇ ಸಾಧನೆಯಾಗಬಾರದು ಎಂಬ ಡಾ. ಶಿವಾನಂದ ಶಿವಾಚಾರ್ಯ ಶ್ರೀಗಳ ನುಡಿಯಂತೆ ಶಿಕ್ಷಣದ ಬಗ್ಗೆ ಅಪಾರವಾದ ಕಾಳಜಿ ಹೊಂದಿದ್ದು ಮಕ್ಕಳ ಬಗ್ಗೆ ಪ್ರೀತಿ ಮತ್ತು ಅವರ ಕಲಿಕೆಯ ಕುರಿತು ಸದಾ ತುಡಿತ ಇರುವ ಅನಿತಾರವರು ಸದಾ ಹೊಸ ಚಿಂತನೆ, ಆಲೋಚನೆಯೊಂದಿಗೆ ಹೊಸ ರೀತಿಯ ಪ್ರಯೋಗ ಕೈಗೊಳ್ಳುತ್ತಾರೆ. ಮಾರ್ಚ್ 2020ರಲ್ಲಿ ಹೊಸದೆಹಲಿಯಲ್ಲಿ ನಡೆದ ಶೈಕ್ಷಣಿಕ ಸಮ್ಮೇಳನದಲ್ಲಿ ಶಿಕ್ಷಕಿ ಅನಿತಾರವರು ಭಾಗವಹಿಸಿ ನೂತನ ಶೈಕ್ಷಣಿಕ ಆವಿಷ್ಕಾರದ ವಿಚಾರ ಕುರಿತು ವಿಷಯ ಮಂಡಿಸಿದ್ದಾರೆ.ಇವರ ಹೊಸ ಐಡಿಯಾ ಗುರುತಿಸಿ ನವದೆಹಲಿಯ ಅರಬಿಂದೋ ಸೊಸೈಟಿ ರೂಪಾಂತರ ಸಂಸ್ಥೆಯಾದ ಝೀರೋ ಇನ್ವೆಸ್ಟ್‌ಮೆಂಟ್ ಇನ್ನೋವೇಷನ್ ಫಾರ್ ಎಜುಕೇಶನ್ ಇನಿಷಿಯೇಟಿವ್ ವತಿಯಿಂದ "ಇನ್ನೋವೇಟಿವ್ ಟೀಚರ್ ಅವಾರ್ಡ್–2020 ಪ್ರಶಸ್ತಿ ನೀಡಿದೆ. ಇವರ ಸಾಧನೆಗೆ ಡಯಟ್ ಪ್ರಾಂಶುಪಾಲರಾದ ಶ್ರೀ ಎಸ್.ಕೆ.ಬಿ.ಪ್ರಸಾದ್,ಮತ್ತು ಹಿರಿಯ ಉಪನ್ಯಾಸಕರು ಹಾಗು ಉಪನ್ಯಾಸಕರು ಅಭಿನಂಧಿಸಿದ್ದಾರೆ.

- ಎಸ್. ಬಸವರಾಜು

ಉಪನ್ಯಾಸಕರು, ಡಯಟ್, ಚಿತ್ರದುರ್ಗ

ಶಿಕ್ಷಣದಲ್ಲಿ ತಂತ್ರಜ್ಞಾನ ಕಾರ್ಯಕ್ರಮ

(STEP: Sikshana Technology in Education Program)

ಲೇಖಕರು : ಗುರುಪಾದಪ್ಪ ಶಿರಬಡಗಿ

ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ತಂತ್ರಜ್ಞಾನವನ್ನು ಅಳವಡಿಸುವ ನಿಟ್ಟಿನಲ್ಲಿ ಹಾಗೂವಿದ್ಯಾರ್ಥಿಗಳಿಗೆ ಅವಶ್ಯಕವಾದ ತಂತ್ರಜ್ಞಾನ ಕೌಶಲಗಳು ಹಾಗೂ 21ನೇ ಶತಮಾನದ ಕೌಶಲಗಳನ್ನು ಅಭ್ಯಸಿಸುವ ಮೂಲಕ ಕಲಿಕೆಯನ್ನು ಶಾಶ್ವತವಾಗಿಸಲು ಪೂರಕವಾದ ಪರಿಸರವನ್ನು ಸಕ್ರಿಯಗೊಳಿಸುವ ಉದ್ದೇಶವನ್ನು ಹೊಂದಿದ್ದು,ಶಿಕ್ಷಣ ಇಲಾಖೆಯೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡು ಶಿಕ್ಷಣ ಫೌಂಡೇಶನ್ ಸಂಸ್ಥೆಯು ಡೆಲ್ ಸಂಸ್ಥೆಯ ಸಹಭಾಗಿತ್ವದಲ್ಲಿ ಸರ್ಕಾರದ ವಿನೂತನ ಶಾಲಾ ಭಾಗವಾದ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಲ್ಯಾಪ್‌ಟಾಪ್ ನೀಡಲಾಗಿದೆ. ಈ ಶಾಲೆಗಳಿಗೆ 6ನೇ ತರಗತಿಗೆ 1 ಹಾಗೂ 7ನೇ ತರಗತಿಗೆ 1ರಂತೆ 2 ಲ್ಯಾಪ್‌ಟಾಪ್‌ಗಳನ್ನು ಹಾಗೂ ತಲಾ ಒಂದು ಪ್ರೊಜೆಕ್ಟರ್ ನೀಡಲಾಗಿದೆ.

ಮೊದಲನೆಯ ಹಂತದಲ್ಲಿ ರಾಜ್ಯದ 57 ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ 114 ಲ್ಯಾಪ್‌ಟಾಪ್ ನೀಡಲಾಗಿದೆ. ಸೆಪ್ಟಂಬರ್ 25, 2019ರಂದು ಆಯ್ದ ಶಾಲೆಗಳ ಶಿಕ್ಷಕರಿಗೆ 1 ದಿನದ ತರಬೇತಿಯನ್ನು ಡೆಲ್ ಕ್ಯಾಂಪಸ್‌ನಲ್ಲಿ ಆಯೋಜಿಸಿಲ್ಯಾಪ್‌ಟಾಪ್ ಹಾಗೂ ಪ್ರೊಜೆಕ್ಟರ್ ನೀಡಲಾಗಿದೆ. ಅದರಲ್ಲಿ ನಮ್ಮ ಚಿತ್ರದುರ್ಗ ಜಿಲ್ಲೆಯ 2 ಶಾಲೆಗಳು ಆಯ್ಕೆಗೊಂಡಿದ್ದು ಸಂತೋಷದ ವಿಷಯ ಆ ಶಾಲೆಗಳೆಂದರೆ,

1. ಕೆ.ಪಿ.ಎಸ್ ಕಾಶೀಪೂರ, ಹೊಳಲ್ಕೆರೆ ತಾಲ್ಲೂಕು
2. ಕೆ.ಪಿ.ಎಸ್ ಜಂಪಣ್ಣನಹಟ್ಟಿ, ಚಿತ್ರದುರ್ಗ ತಾಲ್ಲೂಕು

STEP ಕಾರ್ಯಕ್ರಮ ಒಳಗೊಂಡಿರುವ ಅಂಶಗಳು

- 6 ಮತ್ತು 7ನೇ ತರಗತಿಗಳ ಸಮಾಜ ವಿಜ್ಞಾನ, ವಿಜ್ಞಾನ ಹಾಗೂ ಗಣಿತ ವಿಷಯಗಳ 19 ಪ್ರಾಜೆಕ್ಟ್‌ಗಳನ್ನು ಒಳಗೊಂಡಿದೆ.
- ಪ್ರಾಜೆಕ್ಟ್‌ಗೆ ಸಂಬಂಧಿಸಿದಂತೆ ಮಾಹಿತಿಯನ್ನು, ಚಿತ್ರಗಳನ್ನು ಹಾಗೂ ವಿಡಿಯೋಗಳನ್ನು ಹೊಂದಿದೆ.
- ಶಿಕ್ಷಣ ಪೀಡಿಯಾ ಎಂಬ ಮಾಹಿತಿಯ ಕಣಜವನ್ನು ಹೊಂದಿದ್ದು, ಇದರಲ್ಲಿ ಆಯಾ ಪಾಠಕ್ಕೆ ಸಂಬಂಧಿಸಿದ ಚಿತ್ರಗಳು, ವಿಡಿಯೋಗಳನ್ನು ಒಳಗೊಂಡಿದೆ.
- ICT (Information and Communication technology) ಕೌಶಲಗಳಿಗೆ ಸಂಬಂಧಿಸಿದ ಡೆಮೋ ವಿಡಿಯೋಗಳನ್ನು ಒಳಗೊಂಡಿದೆ.

6 ಮತ್ತು 7ನೇ ತರಗತಿಯ ವಿದ್ಯಾರ್ಥಿಗಳು ತಮ್ಮಲ್ಲಿ ಗುಂಪುಗಳನ್ನು ಮಾಡಿಕೊಂಡು ಪ್ರಾಜೆಕ್ಟ್‌ಗಳನ್ನು ಮಾಡಲು ಯೋಜನೆಗಳನ್ನು ರೂಪಿಸಿಕೊಳ್ಳುತ್ತಾರೆ. ಪ್ರಾಜೆಕ್ಟ್‌ಗಳನ್ನು ಮಾಡಲು ಪ್ರಾಜೆಕ್ಟ್ ಪ್ಲ್ಯಾನರ್, ಕ್ಯಾಟ್‌ಲಾಗ್(ಪ್ರಾಜೆಕ್ಟ್‌ಗಳನ್ನು ಒಳಗೊಂಡಿರುವ ಪುಸ್ತಕ), ಚಾಂಪಿಯನ್ ವಾಲ್, ವೇಳಾಪಟ್ಟಿಗಳನ್ನು ನೀಡಲಾಗಿರುತ್ತದೆ. ಈ ಎಲ್ಲ ಸಾಮಗ್ರಿಗಳನ್ನು

ಬಳಸಿಕೊಂಡು ಒಂದು ವಿಷಯದ ಪ್ರಾಜೆಕ್ಟ್‌ನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಮೊದಲಿಗೆ ತಂಡದ ಎಲ್ಲ ಸದಸ್ಯರು ಪ್ರಾಜೆಕ್ಟ್ ಮಾಡಲು ಕಾರ್ಯವನ್ನು ಹಂಚಿಕೊಳ್ಳುತ್ತಾರೆ. ಲ್ಯಾಪ್‌ಟಾಪ್‌ನಲ್ಲಿ ಪ್ರಾಜೆಕ್ಟ್‌ಗೆ ಪೂರಕವಾದ ವಿಷಯವಸ್ತು, ವಿಡಿಯೋಗಳು ಹಾಗೂ ಚಿತ್ರಪಟಗಳು ಇರುತ್ತವೆ. ತಮ್ಮ ಸ್ಥಳೀಯ ಪ್ರದೇಶದಲ್ಲಿ ಆ ಪ್ರಾಜೆಕ್ಟ್‌ಗೆ ಪೂರಕವಾದ ಮಾಹಿತಿಯನ್ನು ಪಡೆದುಕೊಂಡು ಮೊದಲು ನೀಡಿರುವ ಪ್ರಾಜೆಕ್ಟ್ ಪ್ಲ್ಯಾನರ್‌ನಲ್ಲಿ ತಯಾರಿಸುತ್ತಾರೆ. ಅದರ ಅನುಸಾರ ನೀಡಿರುವ ಲ್ಯಾಪ್‌ಟಾಪ್ ಬಳಸಿಕೊಂಡು ವೇಳಾಪಟ್ಟಿಯ ಪ್ರಕಾರ ಎಮ್.ಎಸ್.ವರ್ಡ್‌ನಲ್ಲಿ ಮಾಹಿತಿಯನ್ನು ಟೈಪ್ ಮಾಡಿ ಅದಕ್ಕೆ ಬೇಕಾದ ಚಿತ್ರಗಳೊಂದಿಗೆ ಹೊಂದಿಸುತ್ತಾರೆ. ಎಂ.ಎಸ್.ಎಕ್ಸೆಲ್, ಪಿ.ಪಿ.ಟಿ ಬಳಸಿಕೊಂಡು ಪ್ರಾಜೆಕ್ಟ್ ತಯಾರಿಸಿ ಅದಕ್ಕೆ ಬೇಕಾದ ಡಿಸೈನ್‌ಗಳನ್ನು ಹಾಕಿ ಅದಕ್ಕೆ ಉತ್ತಮವಾದ ಅನಿಮೇಶನ್‌ಗಳನ್ನು ನೀಡುತ್ತಾರೆಹಾಗೂ ಅದನ್ನು ಶಿಕ್ಷಣ ಸಾಫ್ಟವೇರ್‌ನಲ್ಲಿ ಅಪ್‌ಲೋಡ್ ಮಾಡುತ್ತಾರೆ. ತಯಾರಿಸಿದ ಪ್ರಾಜೆಕ್ಟ್‌ಗೆ ಪೂರಕವಾಗಿ ಒಂದು ದಿನ ಶಾಲೆಯಲ್ಲಿ ಎಲ್ಲ ವಿದ್ಯಾರ್ಥಿಗಳು ಶಿಕ್ಷಕರ ಜೊತೆಗೆ ತಾವು ತಯಾರಿಸಿದ ಪ್ರಾಜೆಕ್ಟ್‌ನ್ನು ಪ್ರೊಜೆಕ್ಟರ ಮೂಲಕ ಪ್ರಸ್ತುತಪಡಿಸುತ್ತಾರೆ. ಈ ಕಾರ್ಯದಲ್ಲಿ ಶಿಕ್ಷಕರು ಅವರಿಗೆ ಮಾರ್ಗದರ್ಶಕರಾಗಿದ್ದು ಉತ್ತಮವಾಗಿ ಪ್ರಾಜೆಕ್ಟ್ ತಯಾರಿಸಲು ನೆರವಾಗುತ್ತಾರೆ. ಇದರಿಂದ ವಿದ್ಯಾರ್ಥಿಗಳಲ್ಲಿ ತಂತ್ರಜ್ಞಾನದ ಕೌಶಲಗಳ ಬೆಳವಣಿಗೆಗೆ ಮತ್ತು 21ನೇ ಶತಮಾನದ ಕೌಶಲಗಳಾದ ಸಂವಹನ, ಸಹಭಾಗಿತ್ವ, ವಿಮರ್ಶಾತ್ಮಕ ಚಿಂತನೆ ಹಾಗೂ ಸೃಜನಶೀಲತೆ ಬೆಳವಣಿಗೆಗೆ ಸಹಾಯಕವಾಗಿದೆ. 2 ಶಾಲೆಗಳಲ್ಲಿ ಪ್ರೊಜೆಕ್ಟರ್ ಹಾಗೂ ಲ್ಯಾಪ್‌ಟಾಪ್ ಬಳಸಿಕೊಂಡು ಶಿಕ್ಷಕರು ಬೋಧಿಸಲು ಸಹಾಯಕವಾಗಿದೆ.

-- ಲೇಖಕರು : ಗುರುಪಾದಪ್ಪ ಶಿರಬಡಗಿ

ಡಾ.ಎ.ಪಿ.ಜೆ ಅಬ್ದುಲ್ ಕಲಾಂ ರವರ ಜನ್ಮ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ರಾಷ್ಟ್ರೀಯ ಆವಿಷ್ಕಾರ್ ಸಪ್ತಾಹ–2020 ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಪ್ರಾಚಾರ್ಯರಾದ ಶ್ರೀ.ಎಸ್.ಕೆ.ಬಿ ಪ್ರಸಾದ್ ಮತ್ತು ಉಪನ್ಯಾಸಕ ವೃಂದ

ಶಿಕ್ಷಕನೋರ್ವನ ಆತ್ಮ ಸಿಂಚನ

ಈ ಮಗು ನಿರಂತರವಾಗಿ ಶಾಲೆಗೆ ಬರುತ್ತಿದೆ ಮಗುವಿಗೆ ಓದಲು ಬರುತ್ತಿಲ್ಲ ಬರೆಯಲು ಬರುತ್ತಿಲ್ಲ ಈ ಸ್ಥಿತಿಗೆ ಕಾರಣ ಮಗು ಎಂದು ನಾನು ಯಾವತ್ತಿಗೂ ಹೇಳುವುದಿಲ್ಲ.. ನನಗೆ ಆ ಮಗುವಿನದೇ ಚಿಂತೆ... ಊಟಕ್ಕೆ ಕುಳಿತಾಗ ಆ ಮಗುವಿನದೇ ನೆನಪು, ಮಲಗಿದಾಗ ಆ ಮಗು ನನ್ನ ಕಣ್ಣೆದುರು ಬಂದು ನಿಂತಂತಾಗುತ್ತದೆ, ನಮಸ್ಕಾರ ಸಾರ್ ಅಂದಂತಾಗುತ್ತದೆ...

ಓಹ್ ನಿದ್ದೆ ಬರುತ್ತಿಲ್ಲ ಪಾಪ ಅನ್ನಿಸುತ್ತದೆ ಆ ಮಗುವಿನ ಬಗ್ಗೆ ಅದು ನನ್ನ ಶಾಲೆಯನ್ನು ನಂಬಿ ಬಂದಿದೆ ನನ್ನ ತರಗತಿಯ ಮಗು ಅದು ನನ್ನನ್ನೇ ನಂಬಿದೆ ಆ ಮಗುವಿಗೆ ಕಲಿಸುವ ಜವಾಬ್ದಾರಿ ನನ್ನದು... ಏನೆಲ್ಲಾ ಪ್ರಯತ್ನ ಮಾಡಿ ನೋಡಿದೆ ಸಾಧ್ಯ ಆಗುತ್ತಿಲ್ಲ.... ಯಾಕೆ ಹೀಗೆ ....?

ಏನಾದರೂ ಮಾಡಿ ಹೇಗಾದರೂ ಮಾಡಿ ನಾನು ಕಲಿಸಲೇಬೇಕು ಆ ಮಗುವಿಗೆ... ಆ ಮಗುವಿಗೆ ಕಲಿಸದಿದ್ದರೆ ನಾನು ವೃತ್ತಿಯಲ್ಲಿ ಸೋತಂತೆ ಕಲಿಸಿಯೇ ಕಲಿಸುತ್ತೇನೆ, ಆ ಮಗು ನನ್ನ ಮಗು, ನಾನು ವೃತ್ತಿಯಲ್ಲಿ ಎಂದೂ ಸೋಲುವುದಿಲ್ಲ. ಆ ಮಗುವನ್ನು ನಾನು ಪ್ರೀತಿಯಿಂದ ಮಾತನಾಡಿಸಿದ್ದರೆ ಬೇಗ ಬೇಗ ಕಲಿಯುತ್ತಿತ್ತೇನೋ.... ನಾನು ಆ ಮಗುವನ್ನು ಗದರಿಸಿದ್ದೇನೆ.

ಛೇ... ನಾಳೆ ಶಾಲೆಗೆ ಹೋದವನೇ ಅವನನ್ನು ಕರೆದು ಪ್ರೀತಿಯಿಂದ ಮಾತನಾಡಿಸಬೇಕು. ಅವನ ಹೆಗಲ ಮೇಲೆ ಕೈ ಹಾಕಿ ನೀನ್ ಜಾಣ ಕಣೋ ಅನ್ನಬೇಕು.. ನಾನು ಅವನನ್ನು ಜಾಣ ಅಂತ ಕರೆದಾಗ ಅವನ ಮುಖ ಅರಳುವುದನ್ನು ನಾನು ನೋಡಬೇಕು.

ಅವನ ಹಾಗೆ ಇನ್ನೂ ಆರು ಮಕ್ಕಳಿವೆ ಅವರನ್ನು ಸಹ ಪ್ರೀತಿಯಿಂದ ಮಾತನಾಡಿಸಬೇಕು. ಶಾಲೆಗೆ ಹೋಗುವಾಗ ಆ ಮಕ್ಕಳಿಗೆ ಏನಾದರೂ ಕೊಂಡೊಯ್ಯಬೇಕು. ನಾನು ಅವರಿಗೆ ಅದನ್ನು ಕೊಡಬೇಕು....

ಛೇ.. ನಾನು ಆ ಮಕ್ಕಳನ್ನು ಕಲಿಕೆಯಲ್ಲಿ ಹಿಂದುಳಿದ ಮಕ್ಕಳೆಂದು ಗುರುತಿಸಿ ಪಟ್ಟಿ ಮಾಡಿದ್ದೇನೆ. ಎಂತಹ ತಪ್ಪು ಮಾಡಿಬಿಟ್ಟೆ... ನಾಳೆ ಆ ಪಟ್ಟಿಯನ್ನು ಹರಿದು ಬಿಸಾಡುವೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳು ಅವರಲ್ಲ.. ಕಲಿಸುವಲ್ಲಿ ಹಿಂದುಳಿದ ಶಿಕ್ಷಕ ನಾನು...

ಅಮಾಯಕ ಮಕ್ಕಳಿಗೆ ನಾನು ಕಲಿಕೆಯಲ್ಲಿ ಹಿಂದುಳಿದ ಮಗು, ಮಕ್ಕಳು ಎಂಬ ಹಣೆಪಟ್ಟಿ ಕಟ್ಟಿದೆ ಇನು ನನ್ನ ತಪ್ಪು.

ನಾನು ಬದಲಾಗುವೆ.. ನಾನು ಬದಲಾದರೆ ತಾನೇ ಆ ಮಗು, ಆ ಮಕ್ಕಳು ಬದಲಾಗಲು ಸಾಧ್ಯ...

ನನ್ನಲ್ಲಿ ಮನೋಬಲ ಇದೆ. ಸಂಕಲ್ಪ ಶಕ್ತಿ ಇದೆ. ನಾನು ಸೋಲಲಾರೆ, ಈ ಮಕ್ಕಳೇ ನನ್ನ ನಿಜವಾದ ವಿದ್ಯಾರ್ಥಿಗಳು. ಇವರಿಗೇ ನಾನು ಹೆಚ್ಚು ಒತ್ತು ಗಮನಕೊಟ್ಟು ಕಲಿಸಬೇಕಾದುದು...

ನಾಳೆಯಿಂದ ನನ್ನ ಗುರಿಯೇ ಬೇರೆ, ಲಕ್ಷವೇ ಬೇರೆ.. ನನ್ನನ್ನು ನಾನು ಇಂತಹ ಮಕ್ಕಳ ಉದ್ಧಾರಕ್ಕಾಗಿ ಸಮರ್ಪಿಸಿಕೊಳ್ಳುವೆ. ನಾನು ಖಂಡಿತವಾಗಿ ನನ್ನ ವರ್ತನೆಯನ್ನು ಬದಲಿಸಿಕೊಳ್ಳುವೆ.

ಪ್ರೀತಿಯಿಂದ ನನ್ನ ಹೆತ್ತ ಮಕ್ಕಳನ್ನು ಮಾತನಾಡಿಸುವುದಿಲ್ಲವೇ ಅದೇ ರೀತಿ ನಾಳೆ ನನ್ನ ಈ ಎಲ್ಲಾ ವಿದ್ಯಾರ್ಥಿಗಳನ್ನು ಮಾತನಾಡಿಸುವೆ... ಅವರ ಜೊತೆ ನಲಿಯುವೆ... ಇದೇ ನನ್ನ ಜೀವನದ ಪರಮೋಚ್ಚ ಗುರಿ.

--ಲೇಖನದ ಕೃಪೆ : ವಾಟ್ಸಪ್‌ನಿಂದ ಸಂಗ್ರಹ

ಒಗಟು

(STEP: Sikshana Technology in Education Program)

ಲೇಖಕರು : ವಿ.ಕನಕಮ್ಮ

ಉಪನ್ಯಾಸಕರು,ಡಯಟ್, ಚಿತ್ರದುರ್ಗ.

ಜನಪದ ಸಾಹಿತ್ಯದ ಪ್ರಕಾರಗಳಂತೆ ಒಗಟುಗಳು ಕೂಡ ಜನತೆಯ ಸೃಷ್ಟಿಯಾಗಿದೆ. ಇವು ಸರ್ವ ಕಾಲಕ್ಕೂ ಅಬಾಲವೃದ್ಧರ ಮನೋರಂಜನೆಯ ಸಾಧನವಾಗಿ, ಜನಪ್ರಿಯವಾದ ಮನ: ಕ್ರೀಡೆಯಾಗಿ, ಬೌದ್ಧಿಕ ವ್ಯಾಯಾಮವಾಗಿ ಬೆಳೆದು ಬಂದಿದೆ. ಒಗಟುಗಳನ್ನು ಕಟ್ಟುವುದು ಮತ್ತು ಒಡೆಯುವುದು ಒಂದು ಲಘು ಹವ್ಯಾಸ. ಜನಾಂಗ ಜೀವನದಲ್ಲಿ ಒಗಟುಗಳು ಗಹನ, ಗಂಭೀರವಾದ ಪಾತ್ರವನ್ನು ವಹಿಸಿರುವುದುಂಟು, ಮಹತ್ತರವಾದ ಉದ್ದೇಶಗಳಿಗೆ ಬಳಕೆಯಾಗಿರುವುದುಂಟು. ಅವುಗಳ ಲೋಕ ಬಹಳ ವಿಸ್ತಾರವಾಗಿದೆ.

ಒಗಟು ಎಂದರೇನು? ಕನ್ನಡದಲ್ಲಿ ಇದಕ್ಕೆ ಒಡಪು, ಮುಂಡಿಗೆ ಎಂಬ ಹೆಸರುಗಳು ಇವೆ. ಶರಣರ ವಚನಗಳಲ್ಲಿ ಮೈದೋರಿರುವ ಒಗಟುಗಳಿಗೆ "ಬೆಡಗಿನ ವಚನಗಳು" ಎಂಬ ವಿಶೇಷಾಭಿದಾನವುಂಟು. ಸಂಸ್ಕೃತದಲ್ಲಿ ಈ ಪ್ರಕಾರವನ್ನು "ಪ್ರಹೇಳಿಕೆ" ಎಂದು ಕರೆಯುವುದುಂಟು. ಒಡಪುಗಳ ನಿಷ್ಪತ್ತಿ ಹೇಗೆ ಎಂದು ಖಚಿತವಾಗಿ ಹೇಳಲು ಬರುವುದಿಲ್ಲ. ತುಸು ಊಹೆ ಮಾಡಬಹುದಷ್ಟೆ. ಒಗಟಿನಲ್ಲಿ ಎರಡು ಸದೃಶ್ಯ ವಸ್ತುಗಳಿರುತ್ತದೆ. ಒಂದು ಉಪಮಾನ, ಇನ್ನೊಂದು ಉಪಮೇಯ ಇಲ್ಲಿ ಉಪಮಾನ ವಾಚ್ಯವಾಗಿರುತ್ತದೆ. ಉಪಮೇಯ ಅಸ್ಪಷ್ಟವಾಗಿ ಗುಹ್ಯವಾಗಿರುತ್ತದೆ. ಅದನ್ನು ಒಗಟಿನ ಕರ್ತೃ ಜಾಣ್ಮೆಯಿಂದ ಬಚ್ಚಿಟ್ಟಿರುತ್ತಾನೆ. ಉಪಮಾನ ಆಧಾರದಿಂದ ಉಪಮೇಯವನ್ನು ಪತ್ತೆ ಹಚ್ಚಬೇಕಾಗುತ್ತದೆ. ಇದು ಬುದ್ಧಿ ಸಾಮರ್ಥ್ಯಕ್ಕೊಂದು ಒರೆಗಲ್ಲು, ಇದರಲ್ಲಿ ಉತ್ತೀರ್ಣವಾಗಿರುವುದು ಕಠಿಣ.

ಒಗಟುಗಳು ಹಾಸ್ಯದ ಒಂದು ಪ್ರಕಾರ, ಅವುಗಳ ವೈಶಿಷ್ಟವೊಂದು ಸೂಚಿತ, ಇದರ ಸಾಹಿತ್ಯ ರೂಪಗಳಿಗಿಂತ ಅವು ಉದ್ದೇಶದಲ್ಲಿ ಭಿನ್ನವೆಂದು ತೋರುತ್ತದೆ. ಉಳಿದ ಪ್ರಕಾರಗಳಲ್ಲಿ ಜನತೆಯ ಸುಖ ದು:ಖಗಳು ಸಹಜವಾಗಿ ಅಭಿವ್ಯಕ್ತವಾಗುತ್ತವೆ. ಒಗಟುಗಳು ಸ್ವಾರಸ್ಯ ಸೌಂದಯ್ಯಗಳನ್ನು ಕೆಲವು ನಿದರ್ಶನಗಳ ಮೂಲಕ ಅರಿಯಬಹುದು. ಒಗಟುಗಳಿಗೆ ವಿಷಯವಾಗದ ಪದಾರ್ಥವೇ ಜಗತ್ತಿನಲ್ಲಿಲ್ಲ. "ತನ್ನಾಸ್ತಿಯನ್ನ ರಸಭಾವಮ್ಪೈತಿಲೋಕೇ" ಎಂದು ಕಾವ್ಯಮೀಮಾಂಸೆಯಲ್ಲಿ ಹೇಳೀದ್ದರೂ ಶಿಷ್ಟ ಕವಿಗಳು ಕೆಲವೇ ಕೆಲವು ವಸ್ತುಗಳನ್ನು ತಮ್ಮ ಕಾವ್ಯ ಪ್ರಾಂತಕ್ಕೆ ಪ್ರವೇಶಗೊಳಿಸಿದರಷ್ಟೆ. ಆದರೆ ಒಗಟುಗಳು ಹಾಗಲ್ಲ. ಅಲ್ಲಿ ಹುಲ್ಲು ಕಡ್ಡಿಯಿಂದ ಹಿಡಿದು ಆಕಾಶದ ತನಕ, ಅಲ್ಪದಿಂದ ಭೂಮದವರೆಗೆ ಎಲ್ಲವೂ ಚಮತ್ಕಾರದಂತಾಗುತ್ತದೆ. ಜನಪದ ಕವಿಗಳು ತಾವು ಕಂಡದ್ದಕ್ಕೆಲ್ಲಾ ಒಗಟಿನ ವೇಷ ತೊಡಿಸಿದ್ದಾರೆ.

ಒಗಟುಗಳ ಅಂತರಾರ್ಥ ಸುಲಭ ಗಮ್ಯವಲ್ಲದಿರಬಹುದು. ಆದರೆ ಅವುಗಳ ಬಾಹ್ಯ ರೂಪ ಮಾತ್ರ ಯಾವಾಗಲೂ ಆಕರ್ಷಕವಾಗಿರುತ್ತದೆ. ಇಲ್ಲದಿದ್ದರೆ ಒಗಟುಗಳಲ್ಲಿ ಯಾರಿಗೂ ಕೂತೂಹಲ ಹುಟ್ಟದಿರಬಹುದು ಎಂತಲೇ ಥಟ್ಟನೇ ಮನಸ್ಸು ಸೆಳೆಯುವಂತೆ, ಆಸಕ್ತಿ ಕೆರಳಿಸುವಂತೆ, ಆಲೋಚನೆಯನ್ನು ಚೋದಿಸುವಂತೆ ಒಗಟುಗಳು ರಚನೆಯಾಗಿರುತ್ತದೆ. ಒಟ್ಟಿನಲ್ಲಿ ಜಗತ್ತಿನ ಅತ್ಯುದಾತ್ತವಾದ ಎಷ್ಟೋ ಅನುಭವಗಳು ಒಗಟಿನ ರೂಪದಲ್ಲಿ ಅಭಿವ್ಯಕ್ತವಾಗಿವೆ ಎಂದರೆ ತಪ್ಪಲ್ಲ. ನಾನಾ ಮನೋಭೂಮಿಕೆಗಳಲ್ಲಿ ಈ ಒಗಟುಗಳ ಉಗಮ, ಬದುಕಿನ ಯಾವುದೋ ನಿಕೃಷ್ಟ ಭಾಗವಲ್ಲ ಒಗಟು. ಏಕೆಂದರೆ ನಮ್ಮ ಜೀವನವೇ ಒಂದು ಬಿಡಿಸಲಾಗದ ಗಂಟು. ಅಥವಾ "ಒಗಂಟು" ಎಂಬ ನೆಲೆಯಲ್ಲಿ ಪರಿಯವಸಾನಗೊಳ್ಳುತ್ತದೆ.

ಇಂದಿನ ಶಿಕ್ಷಣ : ಶಿಕ್ಷಕನ ಪಾತ್ರ

ಲೇಖಕರು : ಡಾ. ಬಿ. ಎಂ. ಗುರುನಾಥ

ಉಪನ್ಯಾಸಕರು ಮತ್ತು ಮಾಜಿ ಸದಸ್ಯರು, ಕರ್ನಾಟಕ ಯಕ್ಷಗಾನ ಬಯಲಾಟ ಆಕಾಡೆಮಿ,

ಚಿತ್ರದುರ್ಗ. ಮೊ:9844108098 ಇ–mail : bmgurunath13@gmail.com

'ಅಮರ್ತ್ಯಸೇನ್ ಅವರು ಶಾಲೆಗಳು ಮುಚ್ಚಿ, ಸೇತುವೆಗಳು ನಿರ್ಮಾಣಗೊಳ್ಳುತ್ತವೆ' ಎನ್ನುತ್ತಾರೆ. ಕಾರಣ ಬಂಡವಾಳ ಶಾಹಿಯ ಉದ್ದೇಶವೇ ಶಿಕ್ಷಣದ ಉದ್ದೇಶವಾದ ಹೊತ್ತಿದು. ಅಂದರೆ, ಶಿಕ್ಷಣದ ಅಂತ್ಯಕಾಲದ ಆರಂಭವಿದು. ವಿಚಿತ್ರವೆಂದರೆ, ಪ್ರತಿಯೊಂದು ಸಮಾಜವು ಶಿಕ್ಷಣಕ್ಕಾಗಿ ತನ್ನ ಸಂಪನ್ಮೂಲವನ್ನು ಎಷ್ಟೇ ವ್ಯಯಿಸಿದರು ಆಯಾ ಸಮಾಜದ ಬಹುಸಂಖ್ಯಾತರು ಆ ಪ್ರಕ್ರಿಯೆಯ ತುದಿಯನ್ನು ಮುಟ್ಟಲು ಸೋಲುತ್ತಾರೆ. ಹಾಗಾಗಿ, ಶಿಕ್ಷಣ ಇಂದು ಬಹುಸಂಖ್ಯಾತರನ್ನು ಆನರ್ಹಗೊಳಿಸುವ ಮಾರ್ಗವಾಗಿದೆ. ಅಲ್ಲದೆ, ಈ ಬಂಡವಾಳಶಾಹಿ ವ್ಯವಸ್ಥೆಗೆ ಎಲ್ಲರಿಗೂ ಉದ್ಯೋಗ ಕೊಡುವ ಶಕ್ತಿ ಇಲ್ಲದಾಗಿ ಬಹುಪ್ರಮಾಣದಲ್ಲಿ ಜನರನ್ನು ಜಾಗತಿಕ ಮಾರುಕಟ್ಟೆಯ ವ್ಯಾಪ್ತಿಯಿಂದ ಹೊರನೂಕುತ್ತವೆ. ಇದಕ್ಕೆ ಇಲ್ಲಿನ ಅಂಕಿ ಅಂಶಗಳೇ ಸಾಕ್ಷಿ. ಇಂತಹ ಸಂದರ್ಭದಲ್ಲಿಯೇ ಶಿಕ್ಷಣ ಎಲ್ಲಾ ದೇಶಗಳಲ್ಲಿಯೂ ಇಂದು ಸಾರ್ವತ್ರಿಕವಾಗಿದೆ. ಇಂಡಿಯಾದಂತಹ ದೇಶದಲ್ಲಿ ಪ್ರಜಾತಂತ್ರ ವ್ಯವಸ್ಥೆ ಪರಿಣಾಮಕಾರಿಯಾಗಿ ಯಶಸ್ಸನ್ನು ಪಡೆಯುವಂತಾಗಬೇಕಾದರೆ ಶಿಕ್ಷಣ ಅವಶ್ಯವಾಗಿದೆ. ಸ್ವಾತಂತ್ರ್ಯ ಬಂದು ಆರು ದಶಕಗಳನ್ನು ಕಳೆದಾಗಿದೆ. ವಸಂತಗಳನ್ನು ಕಳೆದಾಗಿದೆ; ಅರವತ್ತೆಂಟು ಸಂಭ್ರಮಾಚರಣೆಗಳನ್ನು ಆಚರಿಸಿಯೂ ಆಗಿದೆ. ಆದರೂ ಸಹ ಅಕ್ಷರದಿಂದ ವಂಚಿತರಾಗಿ ಉಳಿದವರು ಇನ್ನು ಶೇ.35% ರಷ್ಟಿದ್ದಾರೆ. ಹಾಗಾದರೆ, ಸಾಕ್ಷರತೆಯ ಪ್ರಮಾಣವನ್ನು ನೂರಕ್ಕೆ ನೂರು ತಲುಪಲಿಕ್ಕೆ ಸರ್ಕಾರ ಇದುವರೆಗೂ ಯಾವ ಕಾರ್ಯಕ್ರಮಗಳನ್ನು ರೂಪಿಸಿಲ್ಲವೆ? ಖಂಡಿತಾ ರೂಪಿಸಿದೆ. 'ಮಾನವ ಸಂಪನ್ಮೂಲಗಳ ಅಭಿವೃದ್ಧಿಯಿಂದ ರಾಷ್ಟ್ರದ ಅಭಿವೃದ್ಧಿಯೂ ಸಾಧ್ಯ' ಎಂಬುದನ್ನು ಅರಿತ ಸರ್ಕಾರ ಶಿಕ್ಷಣ ನೀಡುವ ಅನೇಕ ಕಾರ್ಯಕ್ರಮಗಳನ್ನು ನಿರಂತರವಾಗಿ ರೂಪಿಸಿದೆ; ರೂಪಿಸುತ್ತಾ ಬಂದಿದೆ, ಈಗಲೂ ರೂಪಿಸುತ್ತಿದೆ.

ಹೀಗೆ ಸರ್ಕಾರ ರಚನಾತ್ಮಕ ಕಾರ್ಯಕ್ರಮಗಳನ್ನು ನಿರಂತರವಾಗಿ ರೂಪಿಸಿದ್ದಾಗ್ಯೂ ಫಲಿತಾಂಶ ನಿರಾಶಾದಾಯಕವಾಗಿದೆ ಎನ್ನುವುದು ಮಾತ್ರ ಸ್ಪಷ್ಟ. 2008ರ ಸಮೀಕ್ಷೆಯ ಪ್ರಕಾರ, ರಾಜ್ಯದಲ್ಲಿ 72,366 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಇದರಲ್ಲಿ ಬಹುತೇಕ ಎಲ್ಲಾ ಮಕ್ಕಳೂ ಸಹ ದಲಿತ ಸಮುದಾಯದ ಮತ್ತು ಅಲ್ಪ ಸಂಖ್ಯಾತ ಧರ್ಮದ ಮಕ್ಕಳೇ ಆಗಿದ್ದಾರೆ ಎನ್ನುವುದು ಕಳವಳ ಹುಟ್ಟಿಸುತ್ತದೆ. ಶಿಕ್ಷಣಕ್ಕೆ ಎಷ್ಟು ಮಹತ್ವವಿದೆ ಎಂದರೆ, ಶಿಕ್ಷಣವಿಲ್ಲದವನು ಏನಾಗುತ್ತಾನೆ? ಏನಾಗಿದ್ದಾನೆ? ಈ ಬಗೆಯ ಮಾತುಗಳನ್ನು ನಾವು ಕೇಳಿಲ್ಲವೇ? ಆಡಿಲ್ಲವೇ? 'ಶಿಕ್ಷಣವಿಲ್ಲದವನು ಪಶುವಿಗೆ ಸಮಾನ' ಎಂಬ ತುಂಬಾ ಹೋರಾಟದ ನಿರೂಪಣೆಯನ್ನು ಸಹ ನಾವುಗಳು ಕೊಟ್ಟುಕೊಂಡಾಗಿದೆ. ಹಾಗೆಂದಾಗ ಶಿಕ್ಷಣ ಕಲಿತವನು ಕೇವಲ ಸರ್ಕಾರಿ ನೌಕರಿಗಾಗಿಯೇ; ಅಥವಾ ತನ್ನ ಸ್ವಯಂ ಅಭಿವೃದ್ಧಿಗಾಗಿ ಮಾತ್ರವೇ ದುಡಿಯುವುದಾ! ಅಥವಾ ಓದು–ಬರಹ ಇತ್ಯಾದಿ ಬಂದರೆ ಸಾಕಾ! ಶಿಕ್ಷಣಕ್ಕೆ ವಿಶಾಲದೃಷ್ಟಿಯ ಅರ್ಥವಿದೆ ತಾನೆ! ಶಿಕ್ಷಣವೆಂದರೆ ಅದು 'ಜ್ಞಾನ' 'ಜ್ಞಾನ ಸಂಪಾದನೆಯ ಮಾರ್ಗ'; 'ಶಿಕ್ಷಣವೆಂದರೆ ಒಬ್ಬ ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿ'. ಹೀಗೆ ಅನೇಕ ಅರ್ಥಸಾಧ್ಯತೆಗಳು ನಮ್ಮೆದುರಿಗಿವೆ. ಹಾಗಾಗಿ ನಿಜ ಅರ್ಥದಲ್ಲಿ ಶಿಕ್ಷಣ ಎನ್ನುವಂತಹದ್ದು ಮಾನವ ಜೀವನದ ತರಬೇತಿ ಕ್ರಿಯೆಯಾಗಿ 'ಜ್ಞಾನ' ಮತ್ತು 'ಕೌಶಲ'ಗಳ ಅಭಿವೃದ್ಧಿಯಾಗಿ; ಉತ್ತಮ ನೀತಿ 2 ನಿಯಮವಾಗಿ; ಉತ್ತಮಶಿಸ್ತಾಗಿ; ಉತ್ತಮ ಸಂಯಮವಾಗಿ; ಉತ್ತಮ ಸದ್ವರ್ತನೆ ಇತ್ಯಾದಿ ಸಂಸ್ಕಾರಗಳನ್ನು ಕೊಡುವಂತಹದ್ದಾಗಿದೆ. ಇದನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಇಂತಹ ಬದ್ಧತೆಯ ಶಿಕ್ಷಣವನ್ನು ನೀಡುವ ಸಂದರ್ಭದಲ್ಲಿ ಇದನ್ನು ಯಾರು ನೀಡಬೇಕು? ಯಾರಿಗೆ ಕೊಡಬೇಕು? ಯಾರು ಕಲಿಸಬೇಕು? ಯಾವಾಗ? ಎಲ್ಲಿ? ಏನನ್ನು ಕಲಿಸಬೇಕು ಇತ್ಯಾದಿ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ.

ಪ್ರಮುಖವಾಗಿ ಈ ಪ್ರಶ್ನೆಗಳು ಕಲಿಕೆಯ ಪ್ರಕ್ರಿಯೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಈಗಾಗಲೇ ಗಮನಿಸಿದಂತೆ ಶಿಕ್ಷಣವು ವಿನಯ, ಶಿಸ್ತು–ಇತ್ಯಾದಿಗಳನ್ನು ಕಲಿಸುವಂತಹ ಅತ್ಯಂತ ಜೀವ ಸಂವೇದನೆಯ ಕೆಲಸ. ಇಂತವುಗಳನ್ನು ಹೇಳಿಕೊಡುವ ಶಿಕ್ಷಕನ ಜ್ಞಾನ, ಸಾಮರ್ಥ್ಯ, ಸಬಲತೆ ಹೇಗಿರಬೇಕು. ಅದರಲ್ಲೂ, ದಲಿತ ಹಿಂದುಳಿದ ಸಮುದಾಯಗಳ ಮಕ್ಕಳಿಗೆ ಯಾವ ತೆರನಾದ ಜೀವನವನ್ನು ರೂಪಿಸುವಂತಹ ಹಾಗೂ ಮಾರ್ಗದರ್ಶನ ನೀಡುವಂತಹ ಕೆಲಸವಾಗಬೇಕು ಎನ್ನುವುದನ್ನು ನಿರ್ದರಿಸುವಂತಹದ್ದಿರಬಹುದು; ಹಾಗೆಯೇ ಜಗತ್ತಿನೊಳಗಡೆ ಪ್ರವೇಶ ಪಡೆದು ಯಾವುದೇ ಕೀಳಿರಿಮೆಯನ್ನು ಹೊಂದದೇ; ಯಾವುದೇ ಸಂಕೋಲೆಗಳಿಂದ ಬಿಡಗಡೆ ಪಡೆಯುವಂತಾಗಬೇಕು ಎನ್ನುವುದನ್ನು ಚರ್ಚಿಸುವುದೇ ಈ ಲೇಖನದ ಪ್ರಧಾನ ಆಶಯ. ಯಾವುದೇ ಒಬ್ಬ ವ್ಯಕ್ತಿಯ ಬೆಳೆವಣಿಗೆ ಮತ್ತು ವಿಕಾಸಕ್ಕೆ ಕಾರಣವಾಗುವಂತವನೇ ನಿಜವಾದ ಶಿಕ್ಷಕ. ಪ್ರಾಚೀನ ಕಾಲದಿಂದ ಹಿಡಿದು ಇಂದಿನವರೆಗೂ ಈ ವಿಕಾಸತತ್ವದ ಹಿರಿದಾರಿಯಲ್ಲಿ ಈತನೇ ಆದ್ಯ. ಹಾಗಾಗಿ ಈತನಿಗೆ ಸಮಾಜದಲ್ಲಿ ಉತ್ತಮ ಸ್ಥಾನವಿದೆ. ಹಾಗೆಂದಾಕ್ಷಣ ಎಲ್ಲಾ ಕಾಲದಲ್ಲೂ, ಎಲ್ಲಾ ಶಿಕ್ಷಕರಿಗೂ ಇದೇ ಸ್ಥಾನವಿತ್ತೆಂದು ಹೇಳಲು ಸಾಧ್ಯವಿಲ್ಲ. ಇದಕ್ಕೆ ಅಪವಾದಗಳೂ ಉಂಟು. ಚರಿತ್ರೆಯ ಪುಟಗಳು ಈ ಸತ್ಯವನ್ನು ತೆರೆದು ತೋರಿಸಿವೆ. ಆದರೆ, ಸಾರ್ವತ್ರಿಕ ನೆಲೆಯಲ್ಲಿ ಒಬ್ಬ ಉತ್ತಮ ಶಿಕ್ಷಕನಿಗೆ ನಿಜವಾಗಿಯೂ ಉನ್ನತಸ್ಥಾನವಿದೆ. ಒಟ್ಟಾರೆಯಾಗಿ ಈ ವೃತ್ತಿಗೆ ಒಂದು ಘನತೆ–ಗೌರವ ಇದ್ದೇ ಇದೆ. ಇಂದು ಶಿಕ್ಷಣ ಸಂಪೂರ್ಣವಾಗಿ ವ್ಯಾಪಾರೀಕರಣಗೊಂಡಿದೆ. ಹಣಕೊಟ್ಟು ಓದಲು ಸಾಮರ್ಥ್ಯವಿರದ ದಲಿತ ಹಿಂದುಳಿದ ವರ್ಗದ ಮಕ್ಕಳಿಗೆ ಕೌಶಲ್ಯಾಧಾರಿತ ಶಿಕ್ಷಣವನ್ನು ಕೊಡಬೇಕು ಎಂಬುದು ಈ ಹೊತ್ತಿನ ತುರ್ತು. ಹಾಗಾಗಿ ದಲಿತ ಹಿಂದುಳಿದ ವರ್ಗದ ಸಮುದಾಯದ ಮಕ್ಕಳಿಗೆ ಈ ನೆಲೆಯಲ್ಲಿ ಕಲಿಸುವ ಜವಾಬ್ದಾರಿ ಶಿಕ್ಷನ ಮೇಲಿದೆ. ಯಾಕೆಂದರೆ ಇಂದು ಅಭಿಪ್ರಾಯಗಳನ್ನು ಗೌರವಿಸದೇ ಇರುವ ಸಂದರ್ಭ ನಮ್ಮ ಮುಂದಿದೆ. ಶಿಕ್ಷಣ ಸಂಸ್ಥೆಗಳು ಒಂದು ರೀತಿಯ ಯಜಮಾನಿಕೆಯನ್ನು ಪ್ರದರ್ಶಿಸುವತ್ತಿವೆ. ಮಕ್ಕಳ ಆಲೋಚನಾ ಶಕ್ತಿಯನ್ನು ಕುಂದಿಸುವ ಅಪಾಯದ ನಡೆಗಳನ್ನು ಇಡುತ್ತಿವೆ. ಹಾಗಾಗಿ ನಾವುಗಳು ದಲಿತ ಹಿಂದುಳಿದ ವರ್ಗದ ಸಮುದಾಯಗಳ ಮುಗ್ಧ ಮಕ್ಕಳನ್ನು ಭಿನ್ನ ಮಾದರಿಯಲ್ಲಿ ಯೋಚಿಸುವಂತೆ ಸಜ್ಜುಗೊಳಿಸಬೇಕಿದೆ. ನಮ್ಮ ಹಕ್ಕುಬಾಧ್ಯತೆಗಳನ್ನು ನಿರ್ಭಯವಾಗಿ ಕೇಳುವ ಎದೆಗಾರಿಕೆಯನ್ನು ಬೆಳೆಸಬೇಕಾಗಿದೆ. ಹೀಗೆ ದಲಿತರು, ಅಲ್ಪ ಸಂಖ್ಯಾತ ವಿದ್ಯಾವಂತರನ್ನು ಜಗತ್ತಿಗೆ ಮುಖಾಮುಖಿಗೊಳಿಸುವ ಆಲೋಚನಾ ಶಕ್ತಿಯನ್ನು ಬೆಳೆಸುವಲ್ಲಿ ಶಿಕ್ಷಕನ ಶ್ರಮ ಮತ್ತು ಆತನ ತಿಳುವಳಿಕೆ ಮುಖ್ಯವಾಗುತ್ತದೆ. ಇದರರ್ಥ ದಲಿತ ಹಿಂದುಳಿದ ವರ್ಗದ ಮಕ್ಕಳಿಗೆ ಬೇರೆ ಕಡೆ ಅಥವಾ ಆಧ್ಯತೆಯ ಪಾಠ ಹೇಳಬೇಕಾಗಿಲ್ಲ. ಅಥವಾ ವಿದ್ಯಾರ್ಥಿ ಸಮುದಾಯವನ್ನು 3 ವಿಭಾಗಿಸಬೇಕೆಂದಿಲ್ಲ! ಈ ಸಮುದಾಯಗಳ ಸಬಲೀಕರಣಕ್ಕಾಗಿಯೇ ಸರ್ಕಾರದ ಅನೇಕ ಯೋಜನೆಗಳಿವೆ. ಅವುಗಳನ್ನು ಗಮನದಲ್ಲಿಟ್ಟುಕೊಂಡು ಕಲಿಸುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕಾದುದು ಮುಖ್ಯ.

ಪರ್ಯಾಯ ಬೋಧನೆ, ಶಿಷ್ಯವೇತನದ ಸೌಲಭ್ಯ, ಪ್ರತ್ಯೇಕ ಬುಕ್ ಬ್ಯೂರೊವ್ಯವಸ್ಥೆಯ ಸದ್ಬಳಕೆ, ಶುಲ್ಕ ಹಿಂಪಡೆಯುವಿಕೆ ಇತ್ಯಾದಿಗಳನ್ನು ಈ ಸಮುದಾಯದ ಮಕ್ಕಳ ಗಮನಕ್ಕೆ ತರುವ ಕೆಲಸವನ್ನು ಶಿಕ್ಷಕನಾದವನು ಪ್ರಾಮಾಣೀಕತೆಯಿಂದ ಮಾಡಬೇಕಾಗುತ್ತದೆ. ಜಾಗತೀಕರಣಕ್ಕೂ ಮೊದಲು ಅಂದರೆ, ಕೇವಲ ಒಂದು ಆಡಳಿತಕ್ಕೆ, ಆಡಳಿತ ನಡೆಸಲಿಕ್ಕೆ ಸಾಮಾನ್ಯ ಶಿಕ್ಷಣ ಸಾಕಾಗಿತ್ತು. ಕಾರಕೂನ, ಅಧಿಕಾರಿ ಇತ್ಯಾದಿ ಬೇರೆ ಬೇರೆ ಕೆಲವೇ ಕ್ರಿಯೆಗಳಿಗೆ ಮಾತ್ರ ಶಿಕ್ಷಣದ ಅವಶ್ಯಕತೆ ಇತ್ತು. ಆದರೆ, ಜಾಗತೀಕರಣದ ಈ ಸಂದರ್ಭದಲ್ಲಿ ಇಂಗ್ಲಿಷನ್ನು ಕಲಿಸಿ ಕಾರ್ಪೊರೇಟ್ ವಿಭಾಗಗಳಿಗೆ ಪ್ರವೇಶಪಡೆದು; ಅಂತಲ್ಲಿ ತನ್ನೊಳಗೆ ಮೂಲಭೂತವಾಗಿ ದತ್ತವಾಗಿರುವ ಕರುಣೆ, ಪ್ರೀತಿ, ವಿಶ್ವಾಸಗಳನ್ನು ಬಿತ್ತುವ ನಿಟ್ಟಿನ ಶಿಕ್ಷಣ ಖಂಡಿತವಾಗಿಯೂ ಈ ಸಮುದಾಯಗಳಿಗೆ ಬೇಕಿದೆ. ಆಗ ಕನ್ನಡ ಬೇಡವೇ ಬೇಡ! ಎನ್ನುವ ಪ್ರಶ್ನೆಯೂ ಸಹ ನಮ್ಮ ಮುಂದೆ ದುತ್ತನೆ ಎದುರಾಗುತ್ತದೆ. ಇದನ್ನೂ ಸಹ ಅತ್ಯಂತ ಜಾಣ್ಮೆಯಿಂದ ನಿರ್ವಹಿಸಬೇಕಿದೆ. ಇದಕ್ಕೆ ಪ್ರಮುಖ ಕಾರಣ ಈ ಹೊತ್ತಿನ ಶಿಕ್ಷಣದಲ್ಲಿ ಮಾಧ್ಯಮದ್ದೇ ದೊಡ್ಡ ಸವಾಲು! ಅದರಲ್ಲೂ ಇಂತಹ ಸಮುದಾಯಗಳಿಗೆ ಅವರ ಆರ್ಥಿಕ,

ಸಾಮಾಜಿಕ, ಸಾಂಸ್ಕೃತಿಕ ಹೀಗೆ ಒಟ್ಟಂದದ ಪರಿಸರ ಏನಿದೆ ಎನ್ನುವುದನ್ನು ಗಮನಿಸಿ ಶಿಕ್ಷಣವನ್ನು ನೀಡುವ ಅವಶ್ಯಕತೆ ಇದೆ. ಇದೇ ಶಿಕ್ಷಣ ಈಗ್ಗೆ ಹತ್ತು ವರ್ಷಗಳ ಹಿಂದೆ ಹೇಗಿತ್ತು? ಆದರೆ ಈ ಹೊತ್ತು ದೊಡ್ಡ ಮಟ್ಟದ ಬದಲಾವಣೆಯನ್ನು ಕಂಡಿದೆ. ಜೊತೆಗೆ ಇಂದಿನ ಶಿಕ್ಷಣ ನಿಜವಾಗಿಯೂ ಸವಾಲಿನದೇ ಆಗಿದೆ. ಇದಕ್ಕೆ ಮುಖ್ಯ ಕಾರಣ ಭಾಷೆ, ವಿಷಯ, ವಿಜ್ಞಾನ ತಂತ್ರಜ್ಞಾನ ಈ ಎಲ್ಲವೂ ದಲಿತನ ಓದನ್ನು ಉದ್ಯೋಗದೊಂದಿಗೆ, ಆ ದಲಿತ ವಿದ್ಯಾರ್ಥಿಯೊಳಗಿನ ಸೂಕ್ಷ್ಮಸಂವೇದನೆಯೊಂದಿಗೆ ಜೋಡಿಸಬೇಕಿದೆ. ಈ ಸಮುದಾಯಗಳು ಬಯಸುವಂತಹದ್ದೂ ಸಹ ಇದನ್ನೇ! ಈ ಹಿನ್ನೆಲೆಯಲ್ಲಿ ಕೌಶಲ್ಯಾಧಾರಿತ ಅಥವಾ ಉದ್ಯೋಗ ಗಿಟ್ಟಿಸುವ ಸಾಮರ್ಥ್ಯವನ್ನು ಹಾಗೂ ತಾನು ಪಡೆದಂತಹ ಜ್ಞಾನ ಕಾರ್ಪೊರೇಟ್ ವಿಭಾಗದಲ್ಲಿ ಸ್ಥಾನ ಪಡೆಯುವಂತಾಗಬೇಕು. ಇಲ್ಲಿ ಉತ್ಪಾದನೆ, ಮಾರಾಟ, ಲಾಭ ಇವುಗಳೇ ವಿಜೃಂಭಿಸುತ್ತಿರುವುದರಿಂದ ಇಂತಹ ಅನಿವಾರ್ಯತೆಗಳನ್ನು ಎದುರಿಸುವ ಸಾಮರ್ಥ್ಯಗಳನ್ನು ಖಡ್ಡಾಯವಾಗಿ ದಲಿತಯುವಕರಲ್ಲಿ ಬೆಳೆಸಬೇಕಿದೆ. ಈ ಮುಖೇನ ಈ ಸಮುದಾಯಗಳು ಕೊಡಬಹುದಾದ 'ಜಾಗತಿಕ ಮಾನವೀಕರಣವೇ ಈತನನ್ನು ರೂಪಿಸುವ ಶಿಕ್ಷಕನ ಮೇಲೆ ನಿಂತಿದೆ. ಸಹಜವಾಗಿಯೇ ಇನ್ನೊಂದು ಗಂಭೀರ ಪ್ರಶ್ನೆ ನಮ್ಮ ಮುಂದಿದೆ. ಹಾಗಾದರೆ ದಲಿತರಲ್ಲಿ ಕೌಶಲ್ಯವಿಲ್ಲವೆ? ಅಥವಾ ಸಂಪೂರ್ಣವಾಗಿ ಇರಲಿಲ್ಲವೇ? ಖಂಡಿತಾ ಇತ್ತು! ಅದು ಸಾಂಪ್ರದಾಯಿಕವಾಗಿತ್ತು. ಆದರೆ,

ಇಂದು ಆ ಶಿಕ್ಷಣ ಆಧುನಿಕವಾಗಬೇಕಿದೆ; ಟೆಕ್ನೋ ಆಗಬೇಕಿದೆ. ಇಲ್ಲಿ ಅದು ದುರ್ಬಲವಾಗದಂತೆ ಎಚ್ಚರವಹಿಸಬೇಕಾದುದೂ ಸಹ ಬಹಳ ಮುಖ್ಯವಾಗಿದೆ. ಒಬ್ಬ ಶಿಕ್ಷಕ ಪುಸ್ತಕಗಳಿಂದ ಪಡೆಯುವ 4 ಮಾಹಿತಿಯನ್ನು ಮಾತ್ರ ನೆಚ್ಚಿಕೊಳ್ಳದೆ ಇಂದು ದೊರೆಯುವ ಬಹು ಮಾಧ್ಯಮಗಳ ನೆರವಿನಿಂದ ಮಾಹಿತಿಯನ್ನು ಕಲೆ ಹಾಕಿ ಈ ಸಮುದಾಯಗಳಿಗೆ ಸೂಕ್ಷ್ಮಮಾರ್ಗದಲ್ಲಿ ಕಲಿಸಬೇಕಿದೆ. ಇಷ್ಟೆಲ್ಲಾ ಚರ್ಚಿಸುವ; ಹೀಗೆಲ್ಲಾ ಪರ್ಯಾಯಗಳನ್ನು ಯೋಚಿಸುವ ಪ್ರಮೇಯವಿಷ್ಟೆ. ನಿಜಕೌಶಲ್ಯಾಧಾರಿತ ಶಿಕ್ಷಣವನ್ನು ಈ ಸಮುದಾಯದ ವಿದ್ಯಾರ್ಥಿಗಳಿಗೆ ದಕ್ಕಬೇಕೆನ್ನುವ ಒತ್ತಾಸೆ ಹಾಗೂ ವಿದ್ಯಾರ್ಥಿಯು ತಾನು ಕಲಿತಿರುವ ಯಾವುದೇ ವಿಷಯದಲ್ಲಿ ತಜ್ಞನಿರಬೇಕೆಂಬುದೇ ಆಗಿದೆ. ಇದು ಮೊದಲ ಆದ್ಯತೆಯಾಗಬೇಕು. ಆದರೆ ಇನ್ನೊಂದು ಪ್ರಶ್ನೆ ಈ ಬಗೆಯ ಕೌಶಲ್ಯಗಳನ್ನು ಕಲಿಯುವುದರಿಂದ ತಮ್ಮ ಅಂತರಂಗ ಸ್ವರೂಪದಲ್ಲಿನ ನಿಜ ಅರಿವು ದೊರೆಯುತ್ತದೆಯೇ ಎನ್ನುವುದೂ ಸಹ ಮುಖ್ಯವಾಗುತ್ತದೆ. ಈ ನೆಲೆಯಲ್ಲಿ ಶಿಕ್ಷಕ ಈ ಸಮುದಾಯಗಳ ವಿದ್ಯಾರ್ಥಿಗಳನ್ನು ಗ್ರಹಿಸಬೇಕಿದೆ. ಈ ಎಚ್ಚರಿಕೆ ತೀರಾ ಅಗತ್ಯವೂ ಆಗಬೇಕಿದೆ. ಅದರೊಟ್ಟಿಗೆ ಬದುಕಿನ ಕ್ಷಣಕ್ಷಣದ ಸಂಕೀರ್ಣತೆಯನ್ನು ಎದುರಿಸುವ ದ್ರಾಷ್ಟತೆಯ ಕಡೆಗೆ ಗಮನವನ್ನು ಹರಿಸಬೇಕಾಗುತ್ತದೆ. ಇಷ್ಟಾಗಿಯೂ, ಶಿಕ್ಷಣದಲ್ಲಿ ಯಾವುದೇ ಆದರ್ಶಗಳಿಗೆ ಅವಕಾಶಗಳಿರಕೂಡದು. ಏಕೆಂದರೆ ಅವು ವರ್ತಮಾನದ ಗ್ರಹಿಕೆಗಳನ್ನು ಹಿಡಿದಿಡುವಲ್ಲಿ ಸೋಲುತ್ತವೆ. ಈ ಎಲ್ಲಾ ಸಂಗತಿಗಳ ಹಿನ್ನೆಲೆಯಲ್ಲಿ ಈ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರೀತಿ, ಬುದ್ಧಕಾರಣ್ಯ ಮತ್ತು ನಿಜತಾಯ್ತನದ ತಾಜಾತನಗಳನ್ನು ಬೆಳೆಸುವ ಅರಳಿಸುವ ಮತ್ತು ಮುಖ್ಯವಾಗಿ ಸ್ವಾತಂತ್ರ್ಯವನ್ನು ನೀಡುವಂತಹದ್ದು ಶಿಕ್ಷಣವೊಂದೇ ತಾನೆ!?